ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೆ, ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯರ ಸಂಖ್ಯೆಗಳನ್ನು ಹೆಚ್ಚಿಸುವ ಪ್ರಸ್ತಾವವನ್ನು ಕೆಳಕಾಣಿಸಿದಂತೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಕ್ರಮ ಸಂಖ್ಯೆ	ಸಮಿತಿಯ ಹೆಸರು	ವಿಧಾನಸಭಾ ಸದಸ್ಯರುಗಳ ಒಟ್ಟು ಸಂಖ್ಯೆ	ವಿಧಾನಸಭಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಸೂಚಿಸಿರುವ ತಿದ್ದುಪಡಿ.
1.	ಸಾರ್ವಜನಿಕ ಉದ್ದಿಮೆಗಳ ಸಮಿತಿ (ನಿಯಮ 271(1) (ಎ)	13	15
2.	ಅಧೀನ ಶಾಸನ ರಚನಾ ಸಮಿತಿ (ನಿಯಮ 277)	12	15
3.	ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ (ನಿಯಮ 288)	13	15
4.	ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ (ನಿಯಮ 290)	12	15
5.	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ (ನಿಯಮ 305)	12	15

ಅಧ್ಯಕ್ಷರು: ಪ್ರಸ್ತಾವ ಏನೆಂದರೆ-

'ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ಪ್ರಸ್ತಾವವನ್ನು ಮಂಡಿಸಲು ಅನುಮತಿಯನ್ನು ನೀಡುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಅಧ್ಯಕ್ಷರು: ಪ್ರಸ್ತಾವವನ್ನು ಮತಕ್ಕೆ ಹಾಕುವ ಮೊದಲು ಹೇಳುವುದನ್ನು ಹೇಳಿಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಮುಖ್ಯವಾಗಿ ಕೆಲವು ಸಮಿತಿಗಳಲ್ಲಿ ವಿಶೇಷವಾಗಿ ಪ್ರೈವೇಟ್ ಮೆಂಬರ್ಸ್ ಬಿಲ್-ಖಾಸಗಿ ಮಸೂದೆಗಳ ಸಮಿತಿಯಲ್ಲಿ ಇರತಕ್ಕಂಥ ಸದಸ್ಯರಿಗೆ ಕೆಲಸ ಇಲ್ಲ ಎನ್ನುವಂಥಾದ್ದು. ಇವತ್ತು 'ಹಿಂದೂ' ಪತ್ರಿಕೆಯಲ್ಲಿ ಒಂದು ವಿಶ್ಲೇಷಣೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಖಾಸಗಿ ಮಸೂದೆಗಳ ಸಮಿತಿಯಲ್ಲಿ ನಾಮಕರಣವಾಗಿರತಕ್ಕಂಥ ಸದಸ್ಯರಿಗೆ ಕೆಲಸವೇ ಇಲ್ಲ ಎನ್ನುವುದನ್ನು ಈ ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದವರಿಗೆ ಅರ್ಥವಾಗುತ್ತದೆ. ಆದ್ದರಿಂದ ಅವರಿಗೆ ಬೇರೆ ಸಮಿತಿಗಳಲ್ಲಿ ಅವಕಾಶ ಕೊಡಬೇಕು, ಎನ್ನುವ ಕಾರಣಕ್ಕೆ ಅನೇಕ ಜನ ನಮ್ಮ ಪ್ರತಿಪಕ್ಷದ ಮುಖಂಡರುಗಳು

ಮತ್ತು ಸದಸ್ಯರುಗಳು ಬಂದು ಒತ್ತಾಯ ಮಾಡಿದರು. ಆದ್ದರಿಂದ ಈ ಸಂಖ್ಯೆ 13 ಇದ್ದುದನ್ನು 15ಮಾಡಿ ಇಬ್ಬಿಬ್ಬರು ಸದಸ್ಯರನ್ನು ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ 13ನ್ನು 15ಕ್ಕೆ, ಅಧೀನ ಶಾಸನಸಮಿತಿಯಲ್ಲಿ 12 ಇರುವುದನ್ನು 15, ಹಿಂದುಳಿದವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯಲ್ಲಿ 13ನ್ನು 15, ಸಭೆಯ ಮುಂದಿಡಲಾದ ಕಾಗದಪತ್ರಗಳ ಸಮಿತಿಗೆ 12ನ್ನು 15, ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ 12 ಇದ್ದುದನ್ನು 15ಕ್ಕೆ ಏರಿಸಲು ಮಾಡತಕ್ಕಂಥ ಪ್ರಸ್ತಾವನೆಯನ್ನು, ಎಲ್ಲವೂ ಒಂದು ಯೂನಿಫಾರಮ್ ಮಟ್ಟದಲ್ಲಿ ಇರಬೇಕೆಂದು ಹೇಳಿ 15ಕ್ಕೆ ಇದನ್ನು ಏರಿಸಿದ್ದೇವೆ. ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಹೇಳಿ ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮಂಡನೆ ಮಾಡಿರತಕ್ಕಂಥ ಈ ತಿದ್ದುಪಡಿಗೆ ವಿಧಾನಸಭೆಯ ವಿವಿಧ ಸಮಿತಿಗಳು ಕೆಲಸ ಮಾಡತಕ್ಕಂಥ ಹಿನ್ನೆಲೆಯಲ್ಲಿ ಮಾನ್ಯ ಚಂದ್ರೇಗೌಡರು ವಿರೋಧಪಕ್ಷದಲ್ಲಿ ಇದ್ದಂಥ ಸಂದರ್ಭದಲ್ಲಿ, ಮತ್ತು ವಿರೋಧ ಪಕ್ಷದ ನಾಯಕರಾಗಿ ಇದ್ದಂಥ ಸಂದರ್ಭದಲ್ಲಿ ಹಾಗೂ ಅವರು ವಿಧಾನಸಭೆಯ ಅಧ್ಯಕ್ಷರಾಗಿದ್ದಂಥ ಸಮಯದಲ್ಲಿ ಸಹಿತ ಪಾರ್ಲಿಮೆಂಟ್‌ನಲ್ಲಿ ಇರತಕ್ಕಂಥ ವಿಷಯ ಸಮಿತಿಗಳನ್ನು ಇಲ್ಲಿ ತರಬೇಕೆಂದು ಹೇಳಿ ಒಂದು ಘನವಾದ ಉದ್ದೇಶವನ್ನು ಇಟ್ಟುಕೊಂಡು ಆ ಪಾರ್ಲಿಮೆಂಟರಿ ಸಿಸ್ಟಮ್‌ನ್ನು ಅಳವಡಿಸಿ ನಮ್ಮಲ್ಲಿ ಈ ಸ್ಟ್ಯಾಂಡಿಂಗ್ ಕಮಿಟಿಗಳನ್ನು ತೆಗೆದುಕೊಂಡು ಬಂದಿದ್ದರು. ಆದರೆ ದುರಾದೃಷ್ಟವಶಾತ್ ಪರಿಣಾಮಕಾರಿಯಾಗಿ ಕೆಲವು ಕೆಲಸ ಮಾಡಿದವು, ಕೆಲವು ಕೆಲಸ ಮಾಡಲಿಲ್ಲ. ಅಧ್ಯಕ್ಷರೆ, ಈಗ ಇರತಕ್ಕಂಥ, ಐದು ಸಮಿತಿಗಳ ಸಂಖ್ಯೆಯನ್ನು ಹೆಚ್ಚು ಮಾಡತಕ್ಕಂಥ ಉದ್ದೇಶವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಜೊತೆಗೆ ಈ ಕಡೆ ಇರತಕ್ಕಂಥ ಸದಸ್ಯರು ಕೆಲವರು ಹಾಗೂ ಮುಖಂಡರುಗಳ ಜೊತೆಯಲ್ಲಿ ಮಾತನಾಡಿ ಇದನ್ನು ಬದಲಾವಣೆ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ನನ್ನ ಒಂದು ಅಭಿಪ್ರಾಯ ಏನೆಂದರೆ ಈ ಸಮಿತಿಗಳು ಕಳಿಸತಕ್ಕಂಥ ವರದಿಗಳ ಬಗ್ಗೆ ಸರ್ಕಾರ ಇದನ್ನು ಬಹಳ ತೀವ್ರವಾಗಿ ಪರಿಗಣಿಸಬೇಕಾಗುತ್ತದೆ. ನನ್ನ ಒಂದು ಸಂಸದೀಯ ಅನುಭವದಲ್ಲಿ ಹೀಗೆ ಕಳಿಸಿರತಕ್ಕಂಥ ಸಮಿತಿಗಳ ವರದಿಗಳು ಏನಿವೆ, ಅದರಂತೆ ಸರ್ಕಾರ ಕೆಲಸ ಮಾಡತಕ್ಕಂಥಾದ್ದು ಬಹಳ ಕಡಿಮೆ ಸ್ವಾಮಿ. ಮತ್ತು ಆ ವರದಿಗಳನ್ನು ಸಂಪೂರ್ಣವಾಗಿ ಸಂಬಂಧಪಟ್ಟ ಮಂತ್ರಿಗಳು ಓದುತ್ತಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ಸಹಿತ ನನಗೆ ನಂಬಿಕೆ ಇಲ್ಲ. ದಯವಿಟ್ಟು ಯಾರೂ ಇದನ್ನು ತಪ್ಪು ತಿಳಿದುಕೊಳ್ಳಬಾರದು. ಮತ್ತು ನನ್ನ ಸಹೋದ್ಯೋಗಿಗಳನ್ನು ನಾನು ಹೆಚ್ಚು, ಅವರು ಕಡಿಮೆ ಅಥವಾ ಮತ್ತೊಬ್ಬರನ್ನು ದೃಷ್ಟಿಕೋನದಲ್ಲಿ ಇಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ಈ ಸಮಿತಿ ಸಭೆಗಳು ಸಭೆಗೋಸ್ಕರ ಸಭೆಗಳು ಆಗಿರತಕ್ಕಂಥಾದ್ದು ತಮ್ಮ ಗಮನಕ್ಕೆ ಈಗಾಗಲೇ ಬಂದಿರತಕ್ಕಂಥಾದ್ದು ಇದೆ. ಅದು ಖಂಡಿತವಾಗಿಯೂ ಪ್ರತಿಬಿಂಬಿತವಾಗಬಾರದು. ಈಗ ಹಿಂದೂ ಪತ್ರಿಕೆಯಲ್ಲಿ ಬಂದಿರತಕ್ಕಂಥ ಲೇಖನ ಏನಿದೆ, ಅದರಿಂದ ಸಾರ್ವಜನಿಕವಾಗಿ ನಮ್ಮ ಬಗ್ಗೆ, ಶಾಸಕರ ಬಗ್ಗೆ ಏನು ಅಭಿಪ್ರಾಯ ಬರುತ್ತದೆ? ಶಾಸನಗಳು ಆಗತಕ್ಕಂಥ ಸಂದರ್ಭದಲ್ಲಿ ಶಾಸನವನ್ನು ತಿಳಿದುಕೊಂಡು ನಾವು ಬರಬೇಕಾಗುತ್ತದೆ. ಶಾಸನ ರಚನೆ ಮಾಡುವುದಕ್ಕೆ, ಸರ್ಕಾರ ಯಾವ ರೀತಿ ನಡೆಯಬೇಕು ಎನ್ನುವುದರ ಬಗ್ಗೆ ಇರತಕ್ಕಂಥ ಸಮಿತಿಗಳು ಇವು. ನಾವು

ಆ ಸಮಿತಿಗಳು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಹೇಳಿದಾಗ ಮತ್ತು ಸದನದಲ್ಲಿ ಮಸೂದೆಗಳು ಪ್ರಸ್ತಾಪ ಆದಂಥ ಸಂದರ್ಭದಲ್ಲಿ ಅವುಗಳ ಪೂರ್ವಾಪರಗಳನ್ನು ತಿಳಿದುಕೊಳ್ಳದೆ ಆದರಿಂದ ಆಗತಕ್ಕಂಥ ಪರಿಣಾಮಗಳನ್ನು ತಿಳಿದುಕೊಳ್ಳದೆ ನಾವು ಭಾಗವಹಿಸುವುದು, ಅನೇಕ ಸಂದರ್ಭದಲ್ಲಿ ಸಮಯದ ಅಭಾವದಿಂದ ಮತ್ತೊಂದರಿಂದ ಸಹಿತ ನಾವು ಅವುಗಳನ್ನು 'ಪಾಸ್ ಆಯಿತು, ಪಾಸ್ ಆಯಿತು' ಎಂದು ಹೇಳಿರತಕ್ಕಂಥ ಉದಾಹರಣೆಗಳು ಸಹಿತ ಇವೆ. ಈ ಒಂದು ಸನ್ನಿವೇಶದಲ್ಲಿ ಈ ಸಮಿತಿಗಳ ಸದಸ್ಯರುಗಳ ಸಂಖ್ಯೆಯನ್ನು ಕೇವಲ ಹೆಚ್ಚು ಮಾಡುವುದರಿಂದಾಗಿ ಸಮಿತಿಯ ವರದಿಗಳು ಅಥವಾ ಸಮಿತಿಯ ಕಾರ್ಯಕಲಾಪಗಳು ಗುಣಾತ್ಮಕವಾಗಿ ಹೆಚ್ಚಾಗುತ್ತದೆ ಎನ್ನುವುದರ ಬಗ್ಗೆ ನನ್ನದೇ ಆದ ಶಂಕೆ ಮತ್ತು ಅನುಮಾನವನ್ನು ವ್ಯಕ್ತಮಾಡುವುದಕ್ಕೆ ನಾನು ಬಯಸುತ್ತೇನೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನನಗನ್ನಿಸುತ್ತದೆ ಏನೆಂದರೆ ಅನೇಕ ಸಂದರ್ಭದಲ್ಲಿ ತಾವು ನಮ್ಮ ಶಾಸಕ ಮಿತ್ರರಿಗೆ ತರಬೇತಿಯನ್ನು ಕೊಡತಕ್ಕಂಥ ಒಂದು ಅವಶ್ಯಕತೆ ಸಹಿತ ಇದೆ. ಮುಖ್ಯ ಮಂತ್ರಿಗಳನ್ನು ಒಂದು ವಿಚಾರದಲ್ಲಿ ನಾನು ಸ್ವಾಗತ ಮಾಡಿದ್ದೇನೆ. ಇನ್‌ಫಾರ್ಮೇಶನ್ ಟೆಕ್ನಾಲಜಿ ವಿಚಾರದಲ್ಲಿ ಪ್ರತಿಯೊಬ್ಬ ಶಾಸಕರಿಗೂ ಸಹಿತ ಒಂದೊಂದು ಲ್ಯಾಪ್‌ಟ್ಯಾಪ್ ಕಂಪ್ಯೂಟರ್‌ನ್ನು ಶಾಸಕರ ಭವನದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ಆಪರೇಶನ್‌ನ್ನು ತಿಳಿದುಕೊಂಡು ತದನಂತರ ಅವರ ಮತ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ಅಥವಾ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಅಥವಾ ಬೇರೆ ಮಂತ್ರಿಗಳ ಜೊತೆಯಲ್ಲಿ, ಇಲಾಖೆಗಳ ಮುಖ್ಯಸ್ಥರ ಜೊತೆಯಲ್ಲಿ ಮಾಹಿತಿಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಮಾಡಿರತಕ್ಕಂಥ ಕೆಲಸ ಇದು.

ಅಧ್ಯಕ್ಷರು: ನಾಡಿದ್ದು ಸಂಜೆ ಕಂಪ್ಯೂಟರ್ ತರಬೇತಿ ಬಗ್ಗೆ ಮುಖ್ಯಮಂತ್ರಿಗಳಿಂದ ಉದ್ಘಾಟನೆ ಇದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ: ತಮ್ಮನ್ನು ನಾನು ಅಭಿನಂದಿಸುತ್ತೇನೆ. ಇಂತಹ ವಿಚಾರದಲ್ಲಿ ತಾವು ಮತ್ತು ಮುಖ್ಯಮಂತ್ರಿಗಳು ಆಸಕ್ತಿಯನ್ನು ತೆಗೆದುಕೊಂಡು ಇದನ್ನು ಮಾಡುತ್ತಿದ್ದೀರಿ. ಆದರೆ ಈ ಸಮಿತಿಗಳ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ 224 ಜನ ಶಾಸಕರುಗಳಿಗೆ ಯಾವುದಾರೂ ಒಂದು ಸಮಿತಿಯಲ್ಲಿ ಇರಬೇಕು ಎಂದು ಹೇಳಿಬಿಟ್ಟು ನಾವು ಅದನ್ನು ಮಾಡುತ್ತಿದ್ದೇವೆಯೇ ವಿನಹ ಇದರಿಂದೇನೂ ಗುಣಾತ್ಮಕವಾದ ಬದಲಾವಣೆ ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ನಮ್ಮ ಶಾಸಕರುಗಳಿಗೆ ಬಹಳ ಕೆಲಸ ಇರುತ್ತದೆ. ಮಂತ್ರಿಗಳೇ ಸಭೆಗೆ ಬರುವುದಿಲ್ಲವೆಂದು ಹೇಳಿದ ಮೇಲೆ, ಏಕೆಂದರೆ ಅವರು ವಿಸಿಟರ್ಸ್‌ನ್ನು ನೋಡಬೇಕಾಗುತ್ತದೆ. ಇನ್ನು ಶಾಸಕರು ಜನರನ್ನು ನೋಡಬೇಕಾಗುತ್ತದೆ. ಇಲ್ಲಿ ಬರುವಾಗ ಓದಿಕೊಂಡು ಬರಬೇಕಾಗುತ್ತದೆ. ನಾನು ಮೊನ್ನೆ ದಿವಸ ಗ್ರಂಥಾಲಯಕ್ಕೆ ಹೋಗಿದ್ದೆ. ನಾವು ಬಹಳ ಕಡಿಮೆ ಜನ ಇದನ್ನು ಉಪಯೋಗಿಸತಕ್ಕವರು. ಅಲ್ಲಿ ಹೋದಾಗ ಕುಳಿತುಕೊಳ್ಳುವುದಕ್ಕೆ ಜಾಗ ಇರಲಿಲ್ಲ. ನಾನು ಈಗಾಗಲೇ ತಮಗೆ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಸಹಿತ ಹೇಳಿದ್ದೇನೆ. ನಮ್ಮ ಗ್ರಂಥಾಲಯ ಇದೆ, ಒಳ್ಳೆಯ ಪುಸ್ತಕಗಳೂ ಇವೆ. ಆದರೆ ಕುಳಿತುಕೊಳ್ಳುವುದಕ್ಕೆ ನಮಗೆ ಜಾಗ ಇಲ್ಲ. ಆ ಜಾಗವನ್ನು ಒದಗಿಸಿಕೊಡತ್ತೇನೆ ಎಂದು ತಾವು ಹೇಳಿದ್ದಿರಿ. ಈ ಎಲ್ಲ ವಿಷಯಗಳನ್ನು ತಿಳಿದುಕೊಳ್ಳದೆ ಸುಮ್ಮನೆ ಶಾಸನಕ್ಕೋಸ್ಕರ ಶಾಸನ ಮಾಡುವುದಿಲ್ಲ. ಈ ಅಧಿಕಾರಿಗಳು ಶಾಸನಗಳನ್ನು ಯಾವಾಗ ಮಾಡುತ್ತಾರೆ? ಸಮಿತಿಗಳನ್ನು ಯಾವಾಗ ಮಾಡುತ್ತಾರೆ ಎಂದರೆ ಯಾವುದಾದರೂ

ಒಂದು ಕ್ರೈಸಿಸ್ ಬರುತ್ತದೆ. ಆ ಕ್ರೈಸಿಸ್ ಬಂದಾಗ ಗೆಟ್‌ಓವರ್ ಮಾಡುವುದಕ್ಕಾಗಿ 'ಸರ್ ಒಂದು ಕಮಿಟಿಯನ್ನು ಮಾಡಿಬಿಡೋಣ' ಎಂದು ಹೇಳುತ್ತಾರೆ. ಇಲ್ಲದೇಹೋದರೆ ಇನ್ನೊಂದು ಏನು ಹೇಳುತ್ತಾರೆ ಎಂದರೆ ಆ ಕಾನೂನಿನಲ್ಲಿ ಬದಲಾವಣೆ ಆಗಬೇಕು ಎಂದು ಹೇಳುತ್ತಾರೆ. ಎಲ್ಲರೂ ಇಂತಹ ಅಧಿಕಾರಿಗಳು ಎಂದು ನಾನು ಹೇಳುವುದಿಲ್ಲ. Generally that is the attitude of our bureaucracy. ಆದ್ದರಿಂದ ಸಮಿತಿಗಳಲ್ಲಿ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಈ ಸಮಿತಿಗಳ ವರದಿಗಳಲ್ಲಿನ ಗುಣಮಟ್ಟದಲ್ಲಿ ಬದಲಾವಣೆ ಮಾಡುತ್ತೇವೆ ಎನ್ನುವುದರ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ನಾನು ತಿಳಿಸುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಅಭಿಪ್ರಾಯ ಏನೆಂದರೆ ಈ ವರದಿಗಳ ಮೇಲೆ ಫಾಲೋ ಅಪ್ ಆ್ಯಕ್ಷನ್ ಇಲ್ಲ ಎಂಬುದು, ಅಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಷ್ಟೇ ಅಲ್ಲ ಸರ್, ಇನ್ನೂ ಮುಂದಕ್ಕೆ ಇದೆ. ಸಮಿತಿಯ ವರದಿಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳತಕ್ಕದ್ದು ಒಂದು ಭಾಗ. ಅದರ ಜೊತೆಗೆ ಸಮಿತಿಗಳಲ್ಲಿ ಭಾಗವಹಿಸತಕ್ಕಂಥ ಸದಸ್ಯರುಗಳು ಗುಣಾತ್ಮಕವಾಗಿ ಅದನ್ನು ರಚನೆ ಮಾಡುವುದಕ್ಕೆ ಇಲಾಖೆ ಯ ಅಧಿಕಾರಿಗಳನ್ನು ಬಯ್ಯುವುದರಿಂದ ನಮ್ಮ ಸೇಡು, ಸಿಟ್ಟು, ಆಕ್ರೋಶವನ್ನು ವ್ಯಕ್ತಮಾಡಿ ಹೋಗುತ್ತೇವೆಯೇ ಹೊರತು ಬೇರೇನೂ ಇಲ್ಲ. ಕೆಲವು ಸಲ ಸಹಿ ಮಾಡಿಬಿಟ್ಟು ಹೊರಟುಹೋಗಿಬಿಡುವುದೂ ಇದೆ. ಅಲ್ಲಿರತಕ್ಕಂಥ ಅಧ್ಯಕ್ಷರು, ಪಾಪದ ಮನುಷ್ಯ ಕೋರಮ್ ಬರಲಿಲ್ಲ ಎಂದು ಹೇಳಿಕೊಂಡು ಕೋರಮ್‌ಗೋಸ್ಕರ ಕಾಯತಕ್ಕದ್ದು ಸಹ ಇದೆ. ಇದರ ಬಗ್ಗೆ ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡತಕ್ಕಂಥ ಕಾಲ ಬಂದಿದೆ. ಏಕೆಂದರೆ ಇದು ಪಬ್ಲಿಕ್ ಎಕ್ಸ್‌ಚೆಕರ್. ನಮ್ಮ ಸ್ವಂತದ ದುಡ್ಡು ಅಲ್ಲ ಇದು. ಈಗ ನಮಗೆ ಅವಕಾಶ ಇದೆಯೆಂದು ಹೇಳಿಬಿಟ್ಟು ಎಷ್ಟು ಬೇಕಾದರೂ ಟಿ.ಎ.ಯನ್ನು, ಎಷ್ಟು ಬೇಕಾದರೂ ಡಿ.ಎ.ಗಳನ್ನು, ತೆಗೆದುಕೊಂಡು ಹೋಗುತ್ತೇವೆ ಎಂದರೆ, ಓಹ್ ಸಿಂಧ್ಯರವರು ಯಾವುದೇ ಸಮಿತಿಯಲ್ಲೂ ಇಲ್ಲ, ಮಂತ್ರಿಯಾಗಿದ್ದವರು, ಆದ್ದರಿಂದ ನಮಗೆ ಎಲ್ಲ ಸವಲತ್ತುಗಳು ಸಿಕ್ಕಿಹೋಗುತ್ತವೆ, ನೀವು ಹೇಳಿದ ಎಲ್ಲ ಕೆಲಸ ನಡೆಯುತ್ತದೆ ಎಂದು ಹೇಳಿಕೊಳ್ಳುವವರೂ ಇದ್ದಾರೆ, ನಾನು ನನ್ನ ಕಿವಿಯಲ್ಲಿ ಕೇಳಿಸಿಕೊಂಡಿದ್ದೇನೆ. ಆದರೆ ಮಾನ್ಯ ಅಧ್ಯಕ್ಷರೆ, ನಾವು ಬಹಳ ಗಂಭೀರವಾಗಿ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಾವು ಕೊಡತಕ್ಕಂಥ ವರದಿಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಒಂದು ಭಾಗ. ಅದನ್ನು ಸಂಬಂಧಪಟ್ಟ ಮಂತ್ರಿಗಳು ಓದತಕ್ಕಂಥಾದ್ದು, ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿ ಮತ್ತು ಇಲಾಖೆಯ ಮುಖ್ಯಸ್ಥರು ಓದತಕ್ಕಂಥಾದ್ದು ಎರಡನೇ ಭಾಗ.

ಇದೆಲ್ಲಕ್ಕಿಂತ ಹೆಚ್ಚಾಗಿ ನಾವು ಗುಣಾತ್ಮಕವಾದ ವರದಿಗಳನ್ನು ಕೊಡತಕ್ಕಂತಾದ್ದು ಬಹಳ ಮುಖ್ಯ ಇದೆ. ಕೆಲವೇ ಕೆಲವು ಜನ ಸದಸ್ಯರು ಅತ್ಯಂತ ಉತ್ತಮವಾದ ಕೆಲಸಗಳನ್ನು ಸಮಿತಿಯಲ್ಲಿ ಮಾಡುತ್ತಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಈ ವರದಿಗಳು ಬರೀ ವರದಿಗೋಸ್ಕರ ಆಗಬಾರದು. ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಇದೊಂದು ರೀತಿ ಕಾಂಪಿಟಿಷನ್ ಆಗಿಹೋಗಿದೆ. ಅಸೆಂಬ್ಲಿಯದೇ ಒಂದು ಸೆಕ್ರಟೇರಿಯಟ್, ಕೌನ್ಸಿಲ್‌ದೇ ಒಂದು ಸೆಕ್ರಟೇರಿಯಟ್ ಆಗಿದೆ. ಒಂದು ರೀತಿಯಲ್ಲಿ ಕಾಂಪಿಟಿಷನ್ ಅನೇಕ ಸಂದರ್ಭಗಳಲ್ಲಿ ಆಗುತ್ತಿರುವಂಥದ್ದು

ಒಳ್ಳೆಯದಲ್ಲ ಒಳ್ಳೆಯ ಲಕ್ಷಣ ಅಲ್ಲ, ಆರೋಗ್ಯಕರ ಲಕ್ಷಣ ಅಲ್ಲ ಎನ್ನುವುದನ್ನು ಸಹಿತ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸಿ, ಈ ತಿದ್ದುಪಡಿ ಏನಿದೆ, ಇದಕ್ಕೆ ನಾನು ವಿರೋಧ ಮಾಡುವುದಿಲ್ಲ. ಆದರೆ, ಇದರಿಂದೇನೂ ಉಪಯೋಗವಾಗುವುದಿಲ್ಲವೆನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಗುಣಮಟ್ಟದಲ್ಲಿ ಸುಧಾರಣೆಯಾಗಬೇಕಾದರೆ, ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡರೆ, ಆಗ ಏನಾಗುತ್ತದೆ ಎಂದರೆ ಅಧಿಕಾರಿಗಳಿಗೂ ಸಹಿತ ಭಯ ಬರುತ್ತದೆ. ಮತ್ತೆ ಈ ವರದಿಯನ್ನು ಕೊಡತಕ್ಕ ಸದಸ್ಯರೂ ಸಹಿತ, ನಮ್ಮನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಾರೆ ಅನ್ನತಕ್ಕ ಭಾವನೆ ಬರುತ್ತದೆ. ಇಲ್ಲದೇ ಹೋದರೆ, ನಾವು ಒಂದು ರಿಪೋರ್ಟ್ ಕೊಡುತ್ತೇವೆ, ಅದರ ಮೇಲೆ ಸರ್ಕಾರ ಏನೂ ಮಾಡುವುದಿಲ್ಲ ಎಂಬ ಭಾವನೆ ಬರುತ್ತದೆ. ಇದು ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ವಿಧಾನಸಭೆ ಬಗ್ಗೆ, ಇದರ ನಡವಳಿಕೆಗಳ ಬಗ್ಗೆ, ಲೆಜಿಸ್ಲೇಚರ್‌ನ ಹೊರಗಿನ ಕೆಲಸಗಳನ್ನು ನಾವೇನು ಮಾಡುತ್ತೇವೆ ಅದರ ಗೌರವ ಹೆಚ್ಚಾಗಬೇಕಾದರೆ, ಇದು ಆಗಬೇಕೆಂದು ಈ ವಿಚಾರವನ್ನು ಈ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳ ಹಾಗೂ ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, I want to disagree with my senior friend Mr.P.G.R.Sindhia ಅವರು ತಮ್ಮ ಅನುಭವದ ಮಾತುಗಳನ್ನು ಹೇಳಿದ್ದಾರೆ. ಇಲ್ಲಿಯೇ ಜಯಚಂದ್ರರವರು ಇದ್ದಾರೆ ಅವರು ಹೋದಸಲ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಚೇರ್ಮನ್ ಆಗಿದ್ದರು. ಆ ಕಮಿಟಿ ಯಾವ ರೀತಿ ಕೆಲಸ ಮಾಡಿತು ಎಂದು ಆ ಸಮಿತಿ ಸದಸ್ಯರಿಗೇ ಗೊತ್ತು. ನಾವು ಯಾವತ್ತೂ ಕೂಡ ಕೋರಂಗೂ ಕಾಯಲಿಲ್ಲ, ಅಥವಾ ಯಾವುದಕ್ಕೂ ಕಾಯಲಿಲ್ಲ. That PAC did a wonderful job. ನಾವು ಕೊಟ್ಟಿರತಕ್ಕ ವರದಿಯನ್ನು ಮಾನ್ಯ ಸಿಂಧ್ಯರವರು ಓದಿದರೆ ಬಹಳ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಶಾಸಕರು, ನಮ್ಮನ್ನು ಕಳುಹಿಸಿರುವುದೇ ಶಾಸನ ಮಾಡುವುದಕ್ಕೋಸ್ಕರ. ಆದರೆ, ಈ ಸಭೆಯಲ್ಲಿ ಶಾಸನ ಮಾಡುವುದು ಬಿಟ್ಟು ಬಹಳಷ್ಟು ಬೇರೆ ಸಂಗತಿಗಳು ಇಲ್ಲಿ ನಡೆಯುತ್ತವೆ. ಮಾನ್ಯ ಚಂದ್ರೇಗೌಡರು ಪದೇ ಪದೇ ಹೇಳುತ್ತಿರುತ್ತಾರೆ. ಸರ್ಕಾರಿ ಕಲಾಪಕ್ಕೆ ಇಲ್ಲಿ ಅವಕಾಶ ಇಲ್ಲ, ಸರ್ಕಾರಿ ಕಲಾಪಕ್ಕೆ ಇಲ್ಲಿ ಅವಕಾಶ ಇಲ್ಲವೆಂದು ಬಹಳಷ್ಟು ಸಾರಿ ಹೇಳುತ್ತಾ ಇರುತ್ತಾರೆ. ಇವತ್ತು ಹಿಂದೂ ಪತ್ರಿಕೆಯಲ್ಲಿ ಬಂದಿರತಕ್ಕ ರಿಪೋರ್ಟ್ it should spur the individual MLAs into action. ನಾವೂ ಕೂಡ ಖಾಸಗಿ ಶಾಸನ ತರಬಹುದು ಎಂದು ಆ ಲೇಖನ ನಮಗೆಲ್ಲಾ ಮನದಟ್ಟು ಮಾಡಿದೆ. ಆ ರೀತಿ ಮನದಟ್ಟು ಮಾಡಿರುವಾಗ ಪ್ರಾಯಶಃ ಇಲ್ಲಿಯೂ ಕೂಡ ಹೊಸ ಸದಸ್ಯರಿಗೆ ಅಥವಾ ಎಲ್ಲಾ ಶಾಸಕರಿಗೆ ಈ ದೃಷ್ಟಿಯಲ್ಲಿ ಒಂದು ಮಾರ್ಗದರ್ಶನ ಮಾಡುವ ಅಗತ್ಯ ಇದೆ. ಒಂದು ಹೊಸ ಶಾಸನ ಯಾವ ರೀತಿ ತರಬಹುದು, ಯಾವ ಯಾವ ಕ್ಷೇತ್ರದಲ್ಲಿ ತರಬಹುದು, ಯಾವರೀತಿ ಬಿಲ್ ಆಗಬಹುದು ಎಂಬುದನ್ನು ತರುವುದಿದೆ. ಇನ್ನು ಎರಡನೆಯದು, ತಾವು ಆದರ ಬಗ್ಗೆ ಒಂದು ಟಚ್ ಮಾಡಿದ್ದೀರಿ. ಇಲ್ಲಿಯೇ ವೈ.ಕೆ.ರಾಮಯ್ಯನವರು ಕುಳಿತಿದ್ದಾರೆ. ಈ ಸಲ ಎಸ್ಟಿಮೇಟ್ ಕಮಿಟಿಯಲ್ಲಿ ನಮಗೆ ಬಂದಿರುವುದು 1993-94ನೇ ಇಸವಿಯ ಯಾವುದೋ ಒಂದು ಸಮಸ್ಯೆ. ಇವತ್ತು ಆ ಅಧಿಕಾರಿಗಳೂ ಇಲ್ಲ, ಆ ಸಮಸ್ಯೆಯೂ ನೆಗೆದು ಬಿದ್ದುಹೋಗಿದೆ. ನಮ್ಮ ಕಮಿಟಿಗಳಲ್ಲಿ ಅಂಥಾದ್ದು ಬರುತ್ತದೆ.

ಯಾವುದೇ ಸದಸ್ಯರಿಗೆ ಆ ಒಂದು ಸಮಸ್ಯೆ ಬಗ್ಗೆ ಕುಳಿತುಕೊಂಡು ಮಾತನಾಡಬೇಕೆಂದು ಎಂದರೆ ಯಾವ ರೀತಿಯ ಉತ್ಸಾಹ ಬರುತ್ತದೆ? ಒಂದು ಸಲ ವೈ.ಕೆ.ರಾಮಯ್ಯನವರು ಬಹಳ ಖಾರವಾಗಿ ಮಾತನಾಡಿದರು. ನಾವು ಈ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಏನೋ ಬರೆದು ವರದಿ ಕೊಡುತ್ತೇವೆ. ಆದರೆ, ಮುಂದೆ ಏನು? ನಾವು ಹೇಳಿದೆವು 3, ತಿಂಗಳ ಕಾಲ ಟೈಮ್ ಕೊಟ್ಟು, ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ನೋಡುವುದಕ್ಕೆ ಮತ್ತೆ ಈ ಸಮಿತಿಗೆ ತರಿಸಿ ಎಂದು ಹೇಳಿದೆವು. ಅವರು ಬರೀ ಸದಸ್ಯರ ಬಗ್ಗೆ ಹೇಳಿದರು. ಆ ಸಮಿತಿಗಳ ವರದಿಯನ್ನು ಎಷ್ಟು ಜನ ಸದಸ್ಯರು ಓದುತ್ತಾರೆ ಎಂದು ಹೇಳಿದರು. ಈ ಸದನ ಎಷ್ಟು ಸಮಿತಿಗಳ ವರದಿಯನ್ನು ಗಂಭೀರವಾಗಿ ತೆಗೆದುಕೊಂಡಿದೆ. ನಮ್ಮ ಮಂತ್ರಿಗಳು ಎಷ್ಟು ವರದಿಗಳನ್ನು ಓದಿ ಅಪರಾಧ ಮಾಡಿರುವವರ ಮೇಲೆ ಅಥವಾ ತಪ್ಪು ಮಾಡಿರುವವರ ಮೇಲೆ ಶಿಕ್ಷೆ ವಿಧಿಸಿ ತಮ್ಮ ತಮ್ಮ ಇಲಾಖೆಗೆ ಇದೊಂದು ಮಾರ್ಗದರ್ಶಿ ಸೂತ್ರ ಎಂದು ಎಷ್ಟು ಮಂತ್ರಿಗಳು ನೋಡಿದ್ದಾರೆ. ಅದೂ ಕೂಡ ಒಂದು ವಿಶೇಷವಾದ ಸಂದರ್ಭ. ಇವತ್ತು ಮಂತ್ರಿಗಳು ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ತಾವು ಹೇಳಿದ ಹಾಗೆ ಕೆಲಸ ಇಲ್ಲ, ಅನೇಕ ಹೊಸ ಸದಸ್ಯರು ಬಂದಿದ್ದಾರೆ. ಅವರನ್ನೂ ಕೂಡ ಬೇರೆ ಬೇರೆ ಸಮಿತಿಗಳಿಗೆ ಕಳುಹಿಸುವುದರಿಂದ ಕೆಲಸ ಕಲಿತುಕೊಳ್ಳುವ ಒಂದು ಅವಕಾಶ ಸಿಗುತ್ತದೆ. ಈ ಮೂಲಕ ತಮಗೆ ಹೇಳುವುದೇನೆಂದರೆ, ಸಮಿತಿಯ ಜವಾಬ್ದಾರಿಯನ್ನು ನಾವು ಅರಿತುಕೊಂಡಿದ್ದೇವೆ. ಅಥವಾ ಇನ್ನಷ್ಟು ಅರಿತುಕೊಳ್ಳುವುದಕ್ಕೆ ತಾವು ಕ್ರಮ ತೆಗೆದುಕೊಂಡು ಸಮಿತಿಯ ವರದಿಗಳನ್ನು ಈ ಸದನ ಮತ್ತೆ ಮಂತ್ರಿಮಂಡಲ ಇದೂ ಕೂಡ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಆಗ್ರಹ ಮಾಡುತ್ತೇನೆ.

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಪ್ರೈವೇಟ್ ಮೆಂಬರ್ಸ್ ಬಿಲ್ಸ್ ಎಂಬ ಸಮಿತಿಯಲ್ಲಿ ನಾವಿದ್ದೇವೆ. ತಮ್ಮ ಮುಖೇನ ನಾವು ಮಂತ್ರಿಗಳಿಗೆ ಬರೆದುಕೊಟ್ಟಿವು. ಆ ಪ್ರೈವೇಟ್ ಮೆಂಬರ್ಸ್ ಬಿಲ್ ಕಮಿಟಿ ಏನಿದೆ, ಅದರಲ್ಲಿ ನಾವು 11 ಜನ ಶಾಸಕರು ಹೊಸಬರಿದ್ದೇವೆ. ಈ ಸಮಿತಿಗೆ ಏನು ಕೆಲಸ ಇದೆಯೆಂದು ನಾವು ಕೇಳಿದೆವು. ಆ ಸಮಿತಿಗೆ ಏನೂ ಕೆಲಸವೇ ಇಲ್ಲ. ಡೆಲ್ಲಿಗೆ ಹೋಗಿ ಪಾರ್ಲಿಮೆಂಟ್‌ನಲ್ಲಿ ಕೇಳಿದರೆ, ಅಲ್ಲಿಯೂ ಕೂಡ ಈ ಸಮಿತಿ ಇದೆ. ಅವರು ಹೇಳಿದರು, ಅದಕ್ಕೆ ಏನೂ ಕೆಲಸ ಇಲ್ಲ. ವರ್ಷಕ್ಕೊಂದು ಸಾರಿ ಯಾವುದಾದರೂ ಪ್ರೈವೇಟ್ ಬಿಲ್ ಬಂದರೆ ಅದನ್ನು ನೋಡಬಹುದು ಎಂದು. ಪ್ರತಿಯೊಂದು ರಾಜ್ಯದಲ್ಲೂ ಈ ಸಮಿತಿಗಳು ಇವೆ. ಆ ಸಮಿತಿಯಲ್ಲಿರತಕ್ಕ ಸದಸ್ಯರು ಬೇರೆ ಸಮಿತಿಗಳಲ್ಲೂ ಇದ್ದಾರೆ ಎಂದು ತಿಳಿದುಬಂದುದರಿಂದ, ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ನಾವೆಲ್ಲರೂ ಸಹಿ ಮಾಡಿ ಕೊಟ್ಟಿದ್ದೇವೆ; ಈ ಸಮಿತಿಯಲ್ಲಿರತಕ್ಕ ಸದಸ್ಯರನ್ನು ಬೇರೆ ಸಮಿತಿಗೆ ಹಾಕಿಎಂದು ಮಾನ್ಯ ಸದಸ್ಯರು ಹೇಳಿದ ಹಾಗೆ, ನಾವೆಲ್ಲರೂ ಹೊಸಬರು ಬಂದಿದ್ದೇವೆ. ಸಮಿತಿಗಳಲ್ಲಿ ಏನಾದರೂ ಕೆಲಸ ಇದ್ದರೆ, ಬೇರೆ ಸಮಿತಿಗಳಲ್ಲಿ ನೋಡಿ ಕಲಿತುಕೊಳ್ಳುತ್ತೇವೆಂಬ ಮಾತನ್ನು ಹೇಳುತ್ತೇನೆ. ಈ ಸಮಿತಿಯಲ್ಲಿರತಕ್ಕ ಸದಸ್ಯರನ್ನು ಬೇರೆ ಕಡೆ ಹಾಕಿ ಎಂದು ನಾವು ಕೊಟ್ಟಿದ್ದೇವೆ. ದಯವಿಟ್ಟು ಅದನ್ನು ಮಾನ್ಯ ಮಾಡಬೇಕು.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ನನ್ನನ್ನು ಯಾವುದೇ ಕಮಿಟಿಯಲ್ಲಿ ಹಾಕಿಲ್ಲ. ಇದನ್ನು ತಮ್ಮ ಗಮನಕ್ಕೂ ತಂದದ್ದಾಯಿತು. ಏನು ಸ್ವಾಮಿ ನಾನು ಯಾವುದೇ

ಕಮಿಟಿಯಲ್ಲಿ ಇಲ್ಲವಲ್ಲ ಎಂದು ಹೇಳಿದೆ. ತಾವು ಅಧ್ಯಕ್ಷರಾಗಿದ್ದಾಗ, ತಮಗೇ ಅಥರೈಸೇಷನ್ ಕೊಟ್ಟಿದ್ದರು ಸೆನೆಟ್ ಅಥವಾ ಪಬ್ಲಿಕ್ ಪಿಟಿಷನ್ಸ್ ಅಥವಾ ಡೆಲಿಗೇಟೆಡ್ ಲೆಜಿಸ್ಲೇಷನ್ ಯಾವುದಾದರೊಂದರಲ್ಲಿ ಇರಲಿ. ನನಗೇನೂ ಅದು ಬಹಳ ಮುಖ್ಯ ಅಲ್ಲ. ನಾನೇನು ಹೇಳುವುದೆಂದರೆ, ಇನ್ನೂ ಅನೇಕರಿಗೆ ಅವಕಾಶ ಕೊಡುವ ಉದ್ದೇಶದಿಂದ ಮಾಡಿರುವುದು ಒಳ್ಳೆಯದು. ಅನೇಕರನ್ನು ಕಮಿಟಿಗೆ ಹಾಕಿದ ಮೇಲೆ ಕಮಿಟಿ ಆ ಅಧಾರದ ಮೇಲೆ ಕೆಲಸ ನಿರ್ವಹಿಸಬೇಕಾದರೆ ನಿಜವಾಗಿಯೂ ಇದು ಮುಖ್ಯವಾದುದು. ಒಂದು ಪ್ರಶ್ನೆಯನ್ನು ನಾವು ಕಾನೂನು ಸಚಿವರಲ್ಲಿ ಕೇಳಿದೆವು. ಎಲ್ಲಾ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ appointment of ministerial staff ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಕಾನೂನು ಸಚಿವರಿಂದ ಆ ಪ್ರಶ್ನೆಗೆ ಉತ್ತರ ಬರಲೇ ಇಲ್ಲ. ಅದಕ್ಕಾಗಿ ಇದರ ಬಗ್ಗೆ ಏನು ಮಾಡುವುದು? ಹೆಚ್ಚು ಮಾಡುವುದು ನಿಜವಾಗಿಯೂ ಮುಖ್ಯವಾದುದು. ಇದು ಆಗಬೇಕು ಮತ್ತು ಇದರ ಬಗ್ಗೆ ಆಸಕ್ತಿ ಇರತಕ್ಕವರಿಗೆ ಹಾಕಬೇಕು. ಏಕೆಂದರೆ, ಯಾರನ್ನೋ ಹಾಕಿ, ಕಮಿಟಿ ಸಭೆಗಳಿಗೆ ಬರದೇ ಇದ್ದರೆ ಪ್ರಯೋಜನ ಇಲ್ಲ. They must throw light on their functions ಆಗ ಮಾತ್ರ ಇದು ಸಾಧ್ಯ ಎಂದು ಹೇಳುತ್ತೇನೆ.

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಚೇರ್ಮನ್ ಆಗಿದ್ದೇನೆ. ಅನೇಕ ಇಲಾಖೆಗಳ ಎ.ಜಿ.ರಿಪೋರ್ಟ್‌ಗಳನ್ನು 1993ರಿಂದ ರಿವ್ಯೂ ಮಾಡಬೇಕಾಗಿರುತ್ತದೆ. ಮೊನ್ನೆ ಕೂಡ ನಾವು ಯೋಚನೆ ಮಾಡಿದ್ದೇವೆ. ಅನೇಕರು ನಿವೃತ್ತಿಯಾಗಿ ಹೋಗಿದ್ದಾರೆ, ಸತ್ತುಹೋಗಿದ್ದಾರೆ. ಅವರ ಮೇಲೆ ಏನೂ ಕ್ರಮ ಆಗುವುದಿಲ್ಲ. ಇನ್ನೊಂದು ಏನೆಂದರೆ, ಸಮಿತಿಗೆ ಶಕ್ತಿ ಬರಬೇಕಾದರೆ, ನಾವು ಅಧ್ಯಯನ ಮಾಡಿ ಹೋಗಬೇಕು. ಸಭೆಗಳಲ್ಲಿ ಕುಳಿತುಕೊಳ್ಳಬೇಕು, ಮಾತನಾಡಬೇಕು, ಹಾಜರಾತಿ ಸರಿ ಇರಬೇಕು, ಎಲ್ಲವೂ ಇರಬೇಕು. ಸದಸ್ಯರು ಯಾರೂ ಸಹಿ ಮಾಡಿ ಹೋಗಬಾರದು. ಎಲ್ಲರೂ ಸಕಾಲದಲ್ಲಿ ಬರಬೇಕು. ಆದರೆ, ಸಮಿತಿಗೆ ಶಕ್ತಿ ಬರುವುದು ಯಾವಾಗ ಎಂದರೆ, ತಾವು ಹೇಳಿದ ಹಾಗೆ ಈ ವರದಿಯ ಮೇಲೆ ಸರ್ಕಾರ ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಿದಾಗ ಮಾತ್ರ. ಆದರ ಮೇಲೆ ಕ್ರಮ ತೆಗೆದುಕೊಂಡಾಗ ಮಾತ್ರ ಸಮಿತಿಗೆ ಒಂದು ಶಕ್ತಿ ಬರುತ್ತದೆ. ನಾನು ಮೊನ್ನೆ ಕೂಡ ತಮ್ಮ ಮೂಲಕ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಅಂದಾಜು ಸಮಿತಿಯಲ್ಲೂ ಇದ್ದೆ. ವೈಜನಾಥ ಪಾಟೀಲರ ನೇತೃತ್ವದಲ್ಲಿ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಹೋಗಿ ಬಂದು, ಇಂತಹ ಕಡೆಗಳಲ್ಲಿ ಲೋಪ ಆಗಿದೆ ಎಂದು ನಾವು ಗುರುತಿಸಿ ವರದಿ ಕೊಟ್ಟರೆ, ಅದನ್ನು ಇಷ್ಟರವರೆಗೂ ಹಾಗೆಯೇ ಇಟ್ಟು, ಯಾವುದೋ ಒಂದು ರಾಜಕಾರಣ ಕ್ಕೋಸ್ಕರ, ಈಗ ಅಂದಾಜು ಸಮಿತಿಯ ವರದಿಯ ಅಧಾರದ ಮೇಲೆ, ಅದು ಹೌದೋ ಅಥವಾ ಇಲ್ಲವೋ ಎಂದು ತಪಾಸಣೆ ಮಾಡಲಿಕ್ಕೆ ಐ.ಎ.ಎಸ್, ಐ.ಪಿ.ಎಸ್.ಅಧಿಕಾರಿಗಳು ಮೂರು ಜನರನ್ನು ತನಿಖೆಗಾಗಿ ಹಾಕಿದ್ದಾರೆ. ಇದು ನಮ್ಮ ಸರ್ಕಾರಗಳು ನಮ್ಮ ಸಮಿತಿಗಳಿಗೆ ಮಾಡತಕ್ಕ ಅವಮಾನ ಅಲ್ಲದೆ ಬೇರೆ ಯಾವುದೂ ಅಲ್ಲ. ಹೀಗಾಗಿ ಏನು ಅಧಿಕಾರ ಬರುತ್ತೆ ಮಾನ್ಯ ಅಧ್ಯಕ್ಷರೇ ತಾವೇ ಹೇಳಿ. ನಾವು ಸಮಿತಿಗಳಲ್ಲಿ ಕೆಲಸ ಮಾಡಬಹುದೇ? ಇದರಿಂದ, ಇಡೀ ಸಮಿತಿಗಳ ಶಕ್ತಿ ಹರಣವಾಗುತ್ತದೆ. ಇದು ಆಗುತ್ತಾ ಹೋದರೆ, ಈ ಸಮಿತಿಗಳಿಗೆ ಗೌರವ ಬರುವುದಿಲ್ಲ. ಈಗಾಗಲೇ ಹೇಳಿದಹಾಗೆ 3-4 ಜನ ಜಾಸ್ತಿ ಮಾಡುವುದು, ಯಾರಿಗೆ ಅವಕಾಶ

ಇಲ್ಲವೋ ಅವರಿಗೆ ಅವಕಾಶ ಕೊಡುವುದು ಮತ್ತು ಟಿ .ಎ ಮತ್ತು ಡಿ .ಎ ಗಳನ್ನು ಕೊಡಲಿಕ್ಕೋಸ್ಕರ ಎಂದು ಪತ್ರಿಕೆಗಳಲ್ಲಿ ಬರುವುದು, ಸಾರ್ವಜನಿಕರು ನಮ್ಮ ಮೇಲೆ ಒಂದು ತರಹ ಲಘುವಾಗಿ ಪರಿಗಣಿಸುವಂತೆ ಆಗುತ್ತದೆ. ಯಾರು ಅಧ್ಯಯನ ಮಾಡಿ ಬರುತ್ತೇವೆ, ಯಾರು ಇದರಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಯೋಚನೆ ಮಾಡಿ ಬರುತ್ತೇವೆ, ನಮಗೆ ಇದು ತೀರಾ ಅವಮಾನಕರವಾದ ಪ್ರಸಂಗ ಆಗುತ್ತದೆ. ಅದರಿಂದ ಇವತ್ತು ಮಾನ್ಯ ಮುಖ್ಯ ಮಂತ್ರಿಗಳಾಗಲೀ ಅಥವಾ ಮಾನ್ಯ ಕಾನೂನು ತಮ್ಮ ಸಂಸದೀಯ ಸಚಿವರಾಗಲೀ ಇಲ್ಲಿ ಬಹಳಷ್ಟು ಜನ ತಮ್ಮ ಸ್ಥಾನದಲ್ಲಿ ಕುಳಿತು, ಹೋದವರಿದ್ದಾರೆ. ಈ ಒಂದು ವೇದಿಕೆಗೆ ಎಷ್ಟೊಂದು ಗೌರವ ಇದೆ, ಅದನ್ನು ಕಾಪಾಡಿದಂಥ ವ್ಯಕ್ತಿಗಳು ಅಲ್ಲಿದ್ದಾರೆ. ಹಾಗಾಗಿ ಅವರ ಕಾಲದಲ್ಲಾದರೂ ಕೂಡ ಇದಕ್ಕೊಂದು ಶಕ್ತಿ ಬರಲಿ, ಈ ಸಮಿತಿಗಳ ವರದಿಗಳು ಬಂದಾಗ ತಕ್ಷಣವೇ ಅಧಿಕಾರಿಗಳ ಮಂತ್ರಿಗಳ ಗಮನಕ್ಕೆ ತಂದು, ಮಂತ್ರಿಗಳು ಇದರ ಬಗ್ಗೆ ಅಧ್ಯಯನ ಮಾಡಿ ಅದರ ಮೇಲೆ ಕ್ರಮ ತೆಗೆದುತೊಳ್ಳತಕ್ಕ ಒಂದು ವ್ಯವಸ್ಥೆ ಈ ಕಾಲದಲ್ಲಾದರೂ ನಾವು ಮಾಡಿದರೆ ಈ ಸಮಿತಿಗಳಿಗೆ ಮತ್ತು ಅದರಲ್ಲಿ ಕೆಲಸ ಮಾಡಿದಂಥವರಿಗೆ ಒಂದು ಮರ್ಯಾದೆ ಬರುತ್ತದೆ.

12.30 ಪಿಎಂ

ನಾವು ಏನಾದರೂ ಮಾಡಿದರೆ ಮರ್ಯಾದೆ ಇರುತ್ತದೆ. ದಯವಿಟ್ಟು ಇದನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

+ *ಶ್ರೀ ಸಿ.ಬೈರೇಗೌಡ (ವೇಮಗಲ್):* ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ 1972ನೇ ಇಸವಿಯಿಂದ ಇದ್ದೇನೆ. ಮಂತ್ರಿಮಂಡಲದಲ್ಲಿ ಇದ್ದಂಥ ಸಂದರ್ಭವನ್ನು ಬಿಟ್ಟರೆ ಬೇರೆ ಎಲ್ಲಾ ಸಂದರ್ಭದಲ್ಲಿ ನಾನು ಸಮಿತಿಗಳಲ್ಲಿ ಒಂದಲ್ಲಾ ಒಂದು ಸಂದರ್ಭದಲ್ಲಿ ಕೆಲಸ ಮಾಡಿದ್ದೇನೆ. ಮುಖ್ಯವಾಗಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಬಹುತೇಕ ನಾನು ಕೆಲಸ ಮಾಡಿರತಕ್ಕದ್ದು. ಒಂದು ಸಲ ಮಾತ್ರ ಸರ್ಕಾರಿ ಉದ್ದಿಮೆಗಳ ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ನನ್ನ ಈ ದೀರ್ಘವಾದ ಅನುಭವದಲ್ಲಿ ಹೇಳುವುದಾದರೆ, ನಾವುಗಳು ಕೊಡುವ ವರದಿಗಳೇನಿವೆ, ಅದು ಯಾವುದೇ ಸಮಿತಿ ಇರಬಹುದು; ಅದು ಸದನದ ಸಮಿತಿಯಾಗಿದ್ದರೆ ಅದೂ ಸಹ ಸದನದ ವರದಿಯಂತೆಯೇ ಆಗುತ್ತದೆ. ಸದನದ ತೀರ್ಪಿಗೆ ಸರ್ಕಾರ ಯಾವ ನಿಟ್ಟಿನಲ್ಲಿ ಗೌರವವನ್ನು ಕೊಡಬೇಕೋ, ಬೆಲೆಯನ್ನು ಕೊಡಬೇಕೋ ಆ ದೃಷ್ಟಿಯಿಂದ ಇವತ್ತು ಕೆಲಸ ಆಗುತ್ತಿಲ್ಲ. ಸರ್ಕಾರ ಎಲ್ಲಕ್ಕಿಂತ ಹೆಚ್ಚಾಗಿ ನಾವೇ ಇಲ್ಲಿ ನಿರ್ಣಯ ಮಾಡಿಕೊಂಡಿರತಕ್ಕದ್ದು, ನಾವೇ ತೀರ್ಮಾನ ಮಾಡಿದಂತೆ ಕೊಡತಕ್ಕ ವರದಿಗೆ ಅಗೌರವವನ್ನು ಸೂಚಿಸುವ ರೀತಿಯಲ್ಲಿ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕದ್ದು. ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ, ಇದಕ್ಕೆ ಸಾರ್ವಜನಿಕರ ಹಣವು ಯಥೇಚ್ಛವಾಗಿ ಖರ್ಚಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆ ದೂರು ಸಹ ಇದೆ. ಇವೆಲ್ಲವನ್ನು ತಪ್ಪಿಸಬೇಕಾಗಿದ್ದರೆ ಕೊಟ್ಟಂಥ ವರದಿಗಳಿಗೆ ಬೆಲೆ ಬರಬೇಕು. ಅದರ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕು. ಈ ಸದನ ಆ ವರದಿಯನ್ನು ತಿರಸ್ಕರಿಸುವವರೆಗೆ ಅದಕ್ಕೆ ಬೆಲೆ ಉಂಟು. ಅದು ಸಹ ಸದನದ ವರದಿಯೇ ಆಗುತ್ತದೆ. ಸರ್ಕಾರ ಅದನ್ನು ಕಾರ್ಯಗತ ಮಾಡುವುದು ಸಹ ಕಡ್ಡಾಯ ಆಗುತ್ತದೆ. ಆದರೆ ಆ ರೀತಿಯಾದ ಕೆಲಸ ಆಗುತ್ತಿಲ್ಲ.

ಎಲ್ಲೋ ಕೆಲವು ಸಂದರ್ಭಗಳಲ್ಲಿ ಕ್ರಮ ತೆಗೆದುಕೊಂಡಿರುವುದನ್ನು ಬಿಟ್ಟರೆ ಕ್ರಮ ತೆಗೆದುಕೊಂಡಿರುವುದು ಬಹಳ ಅಪರೂಪವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಸಮಿತಿಯ ಮುಂದೆ ಉತ್ತರವನ್ನು ಕೊಡಲು ಬರುವ ಅಧಿಕಾರಿಗಳಿಗೆ ಸಮಿತಿಯ ಸದಸ್ಯರು ಪಾಠ ಹೇಳಿಕೊಡಬೇಕಾಗಿರುವ ಪರಿಸ್ಥಿತಿ ಅನೇಕ ಸಂದರ್ಭದಲ್ಲಿ ಇದೆ. ಸಮಿತಿಗೆ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಬಂದು ಉತ್ತರವನ್ನು ಕೊಡಬೇಕು ಎಂದು ನಮ್ಮ ನಿಯಮಾವಳಿಗಳಲ್ಲಿ ಇದೆ. ಅಂಥ ಹಿರಿಯ ಅಧಿಕಾರಿಗಳಿಗೂ ಸಮಿತಿಯಲ್ಲಿ ಇರುವ ಸದಸ್ಯರು ಪಾಠ ಹೇಳಿ ಕೊಡಬೇಕಾಗಿದೆ. ಅನೇಕ ಅಧಿಕಾರಿಗಳು ಸಮಿತಿಯ ಮುಂದೆ ಬರುವ ಮೊದಲು ಸಂಬಂಧಪಟ್ಟ ಕಡತವನ್ನು ನೋಡಿರುವುದಿಲ್ಲ. ಸಣ್ಣ ಪ್ರಶ್ನೆಯನ್ನು ಕೇಳಿದರೂ ಅದಕ್ಕೆ ಉತ್ತರ ಕೊಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಎಷ್ಟೋ ಸಲ ನಾನು ಸಮಿತಿಯಲ್ಲಿ ಕೆಲಸ ಮಾಡಬೇಕಾದರೆ ಇದು contempt of the committee ಆಗುತ್ತದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಸಲಹೆ ಮಾಡಿರುವುದು ಸಹ ಇದೆ. ಯಾವ ಮಟ್ಟಕ್ಕೆ ಹೋದರೂ ಕೂಡ ಅಧಿಕಾರಿಗಳು ಸಮಿತಿಗೆ ಹೋಗುವ ಮೊದಲು ತಯಾರಿ ನಡೆಸಿ ಕಡತದಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡು, ಸರಳವಾಗಿರುವ ವಿಚಾರಗಳ ಬಗ್ಗೆ ಸಹ ಉತ್ತರವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಇದರ ಬಗ್ಗೆ ಅಧಿಕಾರಿಗಳಿಗೆ ತಿಳಿಸಬೇಕಾಗುತ್ತದೆ. ಸಮಿತಿಯ ಮುಂದೆ ಹೋಗುವ ಸಂದರ್ಭದಲ್ಲಿ ಕಾರ್ಯದರ್ಶಿಗಳಾಗಿ ಬರತಕ್ಕ ಸಂದರ್ಭದಲ್ಲಿ ಅದರ ಬಗ್ಗೆ ಆಮೂಲಾಗ್ರವಾಗಿ ಅಧ್ಯಯನ ಮಾಡಿಕೊಂಡು ಬರಬೇಕಾಗುತ್ತದೆ. ಉತ್ತರವನ್ನು ತಕ್ಷಣವೇ ಹೇಳಬೇಕಾಗುತ್ತದೆ. ಪ್ರಶ್ನೆಯನ್ನು ಕೇಳಿದಾಗ ಅವರು ಆ ಪುಟ, ಈ ಪುಟವನ್ನು ನೋಡಿಕೊಂಡು ಕುಳಿತಿರುತ್ತಾರೆ. ಆಗ ಸಮಿತಿಯು ಯಾವುದೇ ಕೆಲಸವಿಲ್ಲದೆ ಕುಳಿತಿರಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಸಮಿತಿಯ ಮುಂದೆ ಹೋಗುವ ಮೊದಲು ಅಧ್ಯಯನ ಮಾಡಿಕೊಂಡು ಹೋಗುವಂತೆ ಸರ್ಕಾರ ಹೇಳಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಅಂಥ ಅಧಿಕಾರಿ ಸರಿಯಾಗಿ ಉತ್ತರವನ್ನು ಕೊಡಲಿಲ್ಲವೆಂದು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದಿರತಕ್ಕ ನಿದರ್ಶನಗಳು ಸಹ ಇವೆ. ಅಂಥ ಸಂದರ್ಭದಲ್ಲಾದರೂ ಸಹ ಅಧಿಕಾರಿಗಳು ಎಚ್ಚರಿಗೆ ವಹಿಸಬೇಕಾದುದು ಬಹಳ ಮುಖ್ಯ. ಸಮಿತಿಗಳು ಎಷ್ಟು ಚುರುಕಾಗಿ ಕೆಲಸ ಮಾಡುತ್ತವೆ ಅಷ್ಟೇ ಚೆನ್ನಾಗಿ ಸರ್ಕಾರದ ಕೆಲಸ ಆಗುತ್ತದೆ. ಅಷ್ಟೇ ಚೆನ್ನಾಗಿ ಲೋಪದೋಷಗಳನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ಸಾರ್ವಜನಿಕರ ಕೆಲಸ ಆಗಬೇಕಾಗಿದ್ದರೆ ಸಮಿತಿಗಳು ಚುರುಕಾಗಿ, ಚಾಣಾಕ್ಷತನದಿಂದ ಕೆಲಸ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು ಅಧಿಕಾರಿಗಳು ಸಮಿತಿಗೆ ಹೋಗುವ ಮೊದಲು ತಯಾರಿ ಮಾಡಿಕೊಂಡು ಹೋಗಲು ಹೇಳಬೇಕಾಗುತ್ತದೆ. ಆ ರೀತಿ ಸೂಚನೆಗಳು ಸರ್ಕಾರದಿಂದ ಹೋಗಿವೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ಇದನ್ನು ಸರ್ಕಾರ ಗಮನಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಶಿವಣ್ಣ (ತುಮಕೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಭೂನಳ್ಳಿ ಕೆರೆಯ ತಪಾಸಣೆ ಮಾಡಲು ಜವಾಬ್ದಾರಿ ಹೊಂದಿರುವಂಥ ವಸತಿ ಸಮಿತಿಯು ಹೋದ ವರ್ಷ ಬಂದಿತ್ತು. ನಮ್ಮ ಹಿರಿಯ ಸದಸ್ಯರೆಲ್ಲ ಅದರ ತಪಾಸಣೆ ಮಾಡಿದರು. 25 ಕೋಟಿ ವೆಚ್ಚದ ಆ ಕೆರೆಯ ಬಗ್ಗೆ ತಪಾಸಣೆ ಮಾಡಿ ಲೋಪವಾಗಿರುವ ಬಗ್ಗೆ ಪರಿಶೀಲನೆ ಮಾಡಲು

ಸಮಿತಿಯು ಸಿ.ಬಿ.ಐ.ಗೆ ಒಪ್ಪಿಸಲು ವರದಿಯನ್ನು ಕೊಟ್ಟಿತು. ಆ ರೀತಿ ಕೊಟ್ಟಿರುವ ವರದಿಯನ್ನು ಅಧಿಕಾರಿಗಳು ಮುಚ್ಚಿಟ್ಟಿದ್ದಾರೆ ಎಂಬ ವಿಚಾರ ನನ್ನ ಗಮನಕ್ಕೆ ಬಂದಿದೆ. ಇದರಿಂದ ಸಮಿತಿಗಳು ಇರಬೇಕೇ, ಬೇಡವೇ, ಇದರಿಂದ ಸರ್ಕಾರಕ್ಕೆ ಉಪಯೋಗ ಆಗುತ್ತಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗಿರುವ ಬಗ್ಗೆ ಸಮಿತಿಯು ಬಂದು ಪರಿಶೀಲನೆ ಮಾಡಿ ವರದಿಯನ್ನು ಕೊಟ್ಟಿದ್ದರೂ ಇದುವರೆಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲವೆಂದರೆ ಸಮಿತಿಗೆ ಬೆಲೆ ಹೇಗೆ ಬರುತ್ತದೆ? ಸಮಿತಿಗೆ ಬೆಲೆ ಬರಬೇಕಾದರೆ ಸಮಿತಿಯು ನೀಡುವ ವರದಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅನ್ಯಾಯವಾಗುತ್ತದೆ. ಸಮಿತಿಗಳೇ ಬೇಡವಾಗುತ್ತವೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಕೇವಲ ಟಿ.ಎ, ಡಿ.ಎ.ತೆಗೆದುಕೊಳ್ಳುವುದಕ್ಕಾಗಿ ಸಮಿತಿ ಇದ್ದರೆ ಅಂಥ ಸಮಿತಿಗಳು ಬೇಡ. ಸಮಿತಿ ಏನು ವರದಿ ಕೊಡುತ್ತದೆ ಅದರ ಬಗ್ಗೆ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ಅನ್ಯಾಯವಾಗುತ್ತದೆ. ಆದ್ದರಿಂದ ಸಮಿತಿ ನೀಡುವ ವರದಿಯಲ್ಲಿ ಯಾರು ತಪ್ಪು ಮಾಡಿರುತ್ತಾರೆ, ಯಾವ ಅಧಿಕಾರಿ ತ್ಪು ಮಾಡಿರುತ್ತಾರೆ ಅದಕ್ಕೆ ಪುಷ್ಠಿ ತಪ್ಪು ಕೊಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ತಪ್ಪು ಮಾಡಿದ ಅಧಿಕಾರಿ, ಇಲ್ಲವೇ, ಯಾರ ವಿರುದ್ಧವಾದರು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ.ಟಿ.ಪಾಟೀಲ್ (ಬೀಳಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ವ್ಯಕ್ತ ಮಾಡಿರುವ ವಿಚಾರದ ಬಗ್ಗೆ ನನ್ನ ಸಹಮತವು ಇದೆ. ಸದನದ ಸಮಿತಿಗಳಲ್ಲಿ ನಾವು ಮಹತ್ವವಾದ ವಿಚಾರಗಳನ್ನು ಚರ್ಚೆ ಮಾಡುತ್ತೇವೆ. ಒಂದು ತಿಂಗಳ ಹಿಂದೆ ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಕೆಲವು ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ಶಾಸಕರು ಸಮಿತಿಗೆ ಕೇವಲ ಟಿ.ಎ ಡಿ.ಎ. ಗಳಿಗಾಗಿ ಬರುತ್ತಾರೆ ಎಂಬ ಭಾವನೆ ಬಂದುಬಿಟ್ಟಿದೆ. ಆದ್ದರಿಂದ ಸಮಿತಿ ಏನು ತೀರ್ಮಾನ ತೆಗೆದುಕೊಳ್ಳುತ್ತದೆ, ಏನು ವರದಿಯನ್ನು ಕೊಡುತ್ತದೆ ಅದರ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು. ಅದರಿಂದ ಚರ್ಚೆಯಾದ ವಿಚಾರದ ಬಗ್ಗೆ ಮಹತ್ವ ಬರುತ್ತದೆ; ತಪ್ಪು ಮಾಡುವ ಅಧಿಕಾರಿಗಳ ಮೇಲೆ ಕಡಿವಾಣ ಹಾಕಿದಂತಾಗುತ್ತದೆ. ಆದ್ದರಿಂದ ಸಮಿತಿಯ ವರದಿಯ ಬಗ್ಗೆ ಮಹತ್ವವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ): ಮಾನ್ಯ ಅಧ್ಯಕ್ಷರೆ, ಸಮಿತಿಯ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಲು ಮುಖ್ಯವಾದ ಕಾರಣವೇನೆಂದರೆ, ಕಳೆದ ಅವಧಿಯಲ್ಲಿ ವಿಷಯ ಸಮಿತಿಗಳು ಇತ್ತು; ಅದರ ಜೊತೆಗೆ ಸದನದ ಸಮಿತಿಗಳು ಸಹ ಇದ್ದವು. ಆಗ ಎಲ್ಲ ಸದಸ್ಯರಿಗೂ ಒಂದಲ್ಲಾ ಒಂದು ಸಮಿತಿಯಲ್ಲಿ ಇರಲು ಅವಕಾಶ ಇರುತ್ತಿತ್ತು. ಹೊಸ ಅನುಭವವನ್ನು ಪಡೆಯುವುದಕ್ಕೆ ಅಥವಾ ಬೇರೆ ಬೇರೆ ವಿಷಯಗಳ ಬಗ್ಗೆ ಪೂರ್ಣ ಮಾಹಿತಿ ಪಡೆದುಕೊಳ್ಳಲು ಅವಕಾಶ ಇತ್ತು. ಕಳೆದ ಅವಧಿಯಲ್ಲಿ ಸಭಾಧ್ಯಕ್ಷರು ವಿಷಯ ಸಮಿತಿಗಳು ಮತ್ತು ಸದನದ ಸಮಿತಿಗಳು ಎರಡೂ ಇದ್ದರೆ ವಿಷಯಗಳ ಪೂರ್ಣ ಚರ್ಚೆಯಾಗಲು ತೊಂದರೆಯಾಗುತ್ತದೆ, ಅಧಿಕಾರಿಗಳಿಗೆ ಹೆಚ್ಚಿನ ಹೊರೆಯಾಗುತ್ತದೆ ಎಂಬ ಬಗ್ಗೆ ಸಾಕಷ್ಟು ಚರ್ಚೆಯಾಗಿ ವಿಷಯ ಸಮಿತಿಗಳನ್ನು ರದ್ದು ಮಾಡಿದರು. ಆ ರೀತಿ ವಿಷಯ ಸಮಿತಿಗಳನ್ನು ರದ್ದು ಮಾಡಿರುವುದರಿಂದ ಅನೇಕ ಸದಸ್ಯರುಗಳಿಗೆ ಯಾವುದೇ ಸಮಿತಿಯಲ್ಲಿ ಭಾಗವಹಿಸಲು ಆಗುತ್ತಿರಲಿಲ್ಲ. ಇದು ನಮ್ಮ ಆರು ತಿಂಗಳ ಅನುಭವ. ಆದ್ದರಿಂದ ಹೊಸದಾಗಿ ಆಯ್ಕೆಯಾಗಿ ಬಂದಂಥ ಸಮಯದಲ್ಲಿ ಚಿಕ್ಕ

ಸದನದ ರೂಪದಲ್ಲಿ, ದೊಡ್ಡ ಸದನವಾದ ಇಲ್ಲಿ ಎಲ್ಲ ವಿಚಾರಗಳ ಬಗ್ಗೆ ವಿವರವಾಗಿ ಚರ್ಚೆ ಮಾಡಲು ಆಗುವುದಿಲ್ಲ. ಆದರೆ ಸದನದ ಸಮಿತಿಯಲ್ಲಿ ಭಾಗವಹಿಸಿದಾಗ ಪ್ರತಿಯೊಂದು ವಿಚಾರದಲ್ಲಿ ಕೂಲಂಕುಷವಾಗಿ ಚರ್ಚೆ ಮಾಡಲು ಸಾಧ್ಯವಿದೆ.

ನಾವು ಈ ಸದನ ಸಮಿತಿಗಳಲ್ಲಿ ಭಾಗವಹಿಸಿದಾಗ ಪ್ರತಿಯೊಂದು ವಿಚಾರದಲ್ಲಿಯೂ ಕೂಲಂಕುಷವಾಗಿ ಚರ್ಚೆ ಮಾಡಲು ಇಲ್ಲಿಗಿಂತಲೂ ಹೆಚ್ಚು ಅವಕಾಶಗಳು ಅಲ್ಲಿ ಸಿಗುತ್ತವೆ. ಅದು ಬಜೆಟ್ ಅಲೋಕೇಶನ್ ಬಗ್ಗೆ ಇರಬಹುದು, ಖರ್ಚಾಗಿರುವ ಹಣದ ಬಗ್ಗೆ ಸವಿವರವಾದ ಮಾಹಿತಿಗಳನ್ನು ಪಡೆಯುವ ವಿಚಾರ ಇರಬಹುದು, ಇದೇ ಮುಂತಾಗಿ ಇಲಾಖೆಗಳ ಮತ್ತು ಅವುಗಳ ಕಾರ್ಯವ್ಯಾಪ್ತಿಯ ಬಗ್ಗೆ ಚರ್ಚೆ ಮಾಡಲು ಹೆಚ್ಚು ಅವಕಾಶಗಳು ಸಮಿತಿಗಳಲ್ಲಿ ಸಿಗುತ್ತವೆ. ಈ ಸದನದ ಪ್ರತಿರೂಪವಾಗಿ ಸಮಿತಿಗಳಲ್ಲಿ ಚರ್ಚೆ ಮಾಡುವುದಕ್ಕೆ ಹೆಚ್ಚು ಅವಕಾಶ ಇರುವುದರಿಂದಾಗಿ ಇದು ಅತ್ಯಂತ ಅಗತ್ಯವುಳ್ಳದ್ದಾಗಿರುತ್ತದೆ. ಈಗಾಗಲೇ ಉಳಿದೆಲ್ಲಾ ಮಾನ್ಯ ಸದಸ್ಯರುಗಳು ಆ ವಿಷಯ ಕುರಿತು ಪ್ರಸ್ತಾಪ ಮಾಡಿದ್ದಾರೆ. ಅವರೊಂದಿಗೆ ನಾನು ಕೂಡ ಧ್ವನಿಗೂಡಿಸುತ್ತಾ ಅತ್ಯಂತ ಅವಶ್ಯವಾಗಿ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯಲ್ಲಿ ನಾನು ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಒಂದು ಮಹತ್ವದ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅನೇಕ ನಿಗಮಗಳ ವಾರ್ಷಿಕ ಲೆಕ್ಕಪತ್ರಗಳನ್ನು ಪಡೆದುಕೊಂಡು ಅಧ್ಯಯನ ಮಾಡುವ ಅನೇಕ ವಿಷಯಗಳು ನಮಗೆ ಎದುರಾಗುತ್ತವೆ. ಅನೇಕ ಆಶ್ಚರ್ಯಕರ ವಿಷಯಗಳನ್ನು ನಾವು ಗಮನಿಸಿದ್ದೇವೆ. ಕೆಲವು ನಿಗಮಗಳು ತಮ್ಮ ಅಕೌಂಟ್ಸ್‌ನ್ನು ಮೂರು ವರ್ಷಗಳ ತನಕವೂ ಸಲ್ಲಿಸದೇ ಇರುವುದು ಇದೆ. ಆ ಬಗ್ಗೆ ಅವುಗಳಿಗೆ ಕಳೆದ ವರ್ಷದ ಸಮಿತಿಯು ಏನು ಪ್ರಶ್ನೆಗಳನ್ನು ಹಾಕಿತ್ತೋ, ಅದಕ್ಕೆ ಮೂರು ತಿಂಗಳುಗಳ ಅವಧಿಯೊಳಗೆ ಅಕೌಂಟ್ಸ್‌ನ್ನು ಸಲ್ಲಿಸುತ್ತೇವೆ ಎಂದು ಅವರುಗಳು ಏನು ಆಶ್ವಾಸನೆಯನ್ನು ಕೊಟ್ಟಿದ್ದರೋ ಅದೇ ಉತ್ತರವನ್ನು ಅದೇ ನಿಗಮದವರು ಈ ವರ್ಷದ ಸಮಿತಿಯ ಎದುರು ಕೂಡ ಇಟ್ಟಿರುತ್ತಾರೆ. ಹೀಗೆ ನಿಗಮದವರು ಔದಾಸೀನ್ಯವನ್ನು ತೋರಿಸಿದಾಗ ಅವರು ಹೇಳಿದಂತೆ ಮೂರು ತಿಂಗಳೊಳಗಾಗಿ ಲೆಕ್ಕಪತ್ರಗಳನ್ನು ಸಮಿತಿಗೆ ಸಲ್ಲಿಸದಿದ್ದರೆ ಅಂತಹವರುಗಳ ಮೇಲೆ ನಾವು ಏನು ಕ್ರಮವನ್ನು ತೆಗೆದುಕೊಳ್ಳಬೇಕು, ಯಾವ ಕಾನೂನು ಕ್ರಮವನ್ನು ಜರುಗಿಸಬೇಕೆಂಬ ಬಗ್ಗೆ ನಮಗೆ ಏನೇನೂ ಅಧಿಕಾರವಿಲ್ಲ. ಹೀಗಾಗಿ ಸಮಿತಿಗಳು ಹಲ್ಲಿಲ್ಲದ ಸಮಿತಿಗಳಾಗಿವೆ ಅಥವಾ ಪೇಪರ್ ಟೈಗರ್ ಸಮಿತಿಗಳಾಗಿ ಇವೆ. ಸಮಿತಿಗಳು ತಮ್ಮ ವ್ಯಾಪ್ತಿಯ ವಿಷಯಗಳನ್ನು ಕೇವಲ ಅಧ್ಯಯನ ಮಾಡಿ, ವರದಿ ಕೊಡುವುದರ ಜೊತೆಯಲ್ಲಿ ಅದಕ್ಕೆ ಏನಾದರೂ ಅಧಿಕಾರ ವ್ಯಾಪ್ತಿಯು ಇರಬೇಕು. ಸಮಿತಿಯು ಕೊಟ್ಟ ಆದೇಶದಂತೆ ಮೂರು ತಿಂಗಳೊಳಗೆ, ಆರು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕೆಂಬ ಬಗ್ಗೆ ಸೂಕ್ತ ಮತ್ತು ಸಕಾಲಿಕ ಕ್ರಮವನ್ನು ಅವರು ತೆಗೆದುಕೊಳ್ಳದಿದ್ದಲ್ಲಿ ಅವರ ಮೇಲೆ ಏನಾದರೂ ಕಾನೂನಿನ ಕ್ರಮ ತೆಗೆದುಕೊಳ್ಳುವಂತಿರಬೇಕು. ಇಂಥಾದ್ದರ ಬಗ್ಗೆ ಏನಾದರೂ ಒಂದು ವ್ಯವಸ್ಥೆಯನ್ನು ತರದಿದ್ದರೆ ಯಾವ ಸಮಿತಿಗಳು ಕೂಡ ಯಾವುದೇ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಆಗುವುದಿಲ್ಲ ಎಂಬ ವಿಚಾರವನ್ನು ತಮ್ಮ

ಗಮನಕ್ಕೆ ತರಬಯಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ ಅಧ್ಯಕ್ಷರೆ, ಆಡಿಟರ್ ಜನರಲ್‌ರವರು ಎಲ್ಲವನ್ನೂ ಪರಿಶೀಲನೆ ಮಾಡಿ ರಿಪೋರ್ಟ್‌ನ್ನು ಕೊಟ್ಟಮೇಲೆ, ಅದಕ್ಕೆ ಒಂದು ಕಾಲಾವಧಿಯೊಳಗೆ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಆಡಿಟರ್ ಜನರಲ್‌ರವರು ಮಾಡಿದ ಪರಿಶ್ರಮ, ಪರಿಶೀಲನೆ ಮುಂತಾಗಿ ಎಲ್ಲವೂ ವ್ಯರ್ಥವಾಗುತ್ತವೆ. ಅವರ ಕೆಲಸಕ್ಕೆ ಯಾವ ಮಹತ್ವ ಬರುತ್ತದೆ? ಆಡಿಟರ್ ಜನರಲ್‌ರವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುವುದಿಲ್ಲ. ಕಾಗದಪತ್ರಗಳಲ್ಲಿನ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಕಾನೂನಿನ ಪ್ರಕಾರ, ನಿಯಮಾವಳಿಗಳ ಪ್ರಕಾರ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಅವರು ನೋಡುತ್ತಾರೆ. ಈ ಕುರಿತು ಸಂಬಂಧಪಟ್ಟವರು ಮಾಡಿರುವ ಪತ್ರವ್ಯವಹಾರ ಮುಂತಾದವುಗಳನ್ನು ನೋಡಿ ಅವರು ರಿಪೋರ್ಟ್‌ನ್ನು ಕೊಡುತ್ತಾರೆ. ಇದನ್ನು ಕೊಟ್ಟಮೇಲೆ ಸಂಬಂಧಪಟ್ಟವರು ಎಷ್ಟು ಅವಧಿಯೊಳಗೆ ಕ್ರಮ ತೆಗೆದುಕೊಳ್ಳಬೇಕು, ಒಂದು ವೇಳೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ಅದಕ್ಕೆ ಏನೂ ಉತ್ತರವನ್ನು ಕೊಡದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ರೀತಿಯಲ್ಲಿ ನಿಯಂತ್ರಣವನ್ನು ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ 6-7 ವರ್ಷಗಳಾದರೂ ಯಾವುದೇ ಸೂಕ್ತ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಎಂಬುದನ್ನು ನಾವುಗಳು ಗಮನಿಸಿದ್ದೇವೆ. ಎಷ್ಟೋ ಅಧಿಕಾರಿಗಳು ಆಡಿಟರ್ ಜನರಲ್‌ರವರು ಕೊಟ್ಟಂಥ ರಿಪೋರ್ಟ್‌ಗೆ ಕ್ರಮ ಜರುಗಿಸದೇ ನಿವೃತ್ತರಾಗಿ ಹೋಗಿರುವುದು ಕೂಡ ಬಹಳಷ್ಟು ಇದೆ. ಇದರಿದಾಗಿ ಬಹಳ ದೊಡ್ಡ ಅನಾಹುತಗಳು ಆಗಿವೆ. ನಾನು ಪಿಎಸಿ.ಮತ್ತಿತರ ಸಮಿತಿಗಳಲ್ಲಿ ಕೆಲಸ ಮಾಡಿ ಅನುಭವದಲ್ಲಿ ಇದನ್ನು ಕಂಡಿದ್ದೇನೆ. ಸಮಿತಿಗಳಿಗೆ ಮಹತ್ವ ಬರಬೇಕಾದರೆ ಈ ರಿಪೋರ್ಟ್‌ಗಳ ಅನುಷ್ಠಾನದ ಬಗ್ಗೆ ಸರಿಯಾದಂಥ ಕ್ರಮ ಆಗಲೇಬೇಕು. ಇಲ್ಲಿ ಎಲ್ಲ ಅನುಭವಿ ಸಚಿವರಗಳು ಇದ್ದಾರೆ, ಅನುಭವಿ ಮುಖ್ಯಮಂತ್ರಿಯವರು ಇದ್ದಾರೆ. ಇವರ ಕಾಲದಲ್ಲಾದರೂ ಸರಿಯಾದಂಥ ಕ್ರಮವನ್ನು ತೆಗೆದುಕೊಂಡರೆ ಪಾರದರ್ಶಕವಾದಂಥ ಆಡಳಿತವನ್ನು ಕೊಡುವುದಕ್ಕೆ ಸಾಧ್ಯತೆ ಆಗುತ್ತದೆ. ಆಡಳಿತದ ಮೆಶಿನರಿಯು ಕೂಡ ಚುರುಕಾಗಿ ಕೆಲಸ ಮಾಡುತ್ತದೆ. ಇಲ್ಲವಾದರೆ 50 ವರ್ಷಗಳಿಂದ ನಡೆದುಕೊಂಡು ಬಂದಂತೆ ಅಧಿಕಾರಿಗಳು ಮುಂದುವರಿಯುತ್ತಾರೆ. ಇದರಿಂದ ಯಾವ ಉಪಯೋಗವೂ ಆಗುವುದಿಲ್ಲ ಎಂದು ಹೇಳಲಿಚ್ಛಿಸುತ್ತೇನೆ. ನನ್ನ ಈ ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವೈ.ಕೆ.ರಾಮಯ್ಯ (ಹುಲಿಯೂರುದುರ್ಗ): ಮಾನ್ಯ ಅಧ್ಯಕ್ಷರೆ, ಸದನದ ಸಮಿತಿಗಳ ವಿಚಾರದಲ್ಲಿ ನನ್ನ ಸ್ನೇಹಿತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಸದನದ ಸಮಿತಿಗಳ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕೆನ್ನುವ ಪ್ರಸ್ತಾವವು ಸದನದ ಮುಂದೆ ಇದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಇಂಥ ತೀರ್ಮಾನಗಳನ್ನು ನಾವು ಜನರ ಕಲ್ಯಾಣಕ್ಕಾಗಿ ಜನರ ಹಿತಕ್ಕಾಗಿ ತೆಗೆದುಕೊಳ್ಳುತ್ತೇವೆ ಎನ್ನುವ ಅಭಿಪ್ರಾಯವು ನನ್ನದೂ ಅಲ್ಲ, ಅವರದೂ ಅಲ್ಲ. Because of certain political compulsions we take the decision. I think, all my friends will agree with this. ಮಾನ್ಯ ಸದಸ್ಯ ಮಿತ್ರರು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಕೂಡ ನನ್ನ ಧ್ವನಿಯನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದಾಗಿ

ಈ ಸದನದ ಸಮಿತಿಗಳ ನಡವಳಿಕೆಗಳ ಬಗ್ಗೆ ಮಾನ್ಯ ಸಿಂಧ್ಯರವರು, ಮಾನ್ಯ ಸುರೇಶ್ ಕುಮಾರ್‌ರವರು ಮತ್ತಿತರರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾವ್ಯಾರೂ ಗಂಭೀರವಾಗಿ ಪರಿಶೀಲನೆ ಮಾಡುತ್ತಾ ಇಲ್ಲ. ಪರಿಗಣನೆ ಮಾಡುತ್ತಾ ಇಲ್ಲ ಮತ್ತು ಗಮನಿಸುತ್ತಾ ಇಲ್ಲ. ಬರುತ್ತೇವೆ ರುಜು ಹಾಕುತ್ತೇವೆ ಎದ್ದು ಹೊರಟು ಹೋಗುತ್ತಾ ಇದ್ದೇವೆ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದು ಸರಕಾರದ ಕೈಯ್ಯಲ್ಲಿಲ್ಲ, ತಮ್ಮ ಕೈಯ್ಯಲ್ಲಿಲ್ಲ, ನಮ್ಮ ಕೈಯ್ಯಲ್ಲಿಲ್ಲ. ಆದ್ದರಿಂದ ನಾವೆಲ್ಲರೂ ಸೇರಿಕೊಂಡು ಮಾತನಾಡಬೇಕಾಗುತ್ತದೆ. ನಾವುಗಳು ಎಷ್ಟು ಗಂಭೀರವಾಗಿ ಸಮಿತಿಯ ಸಭೆಗಳಲ್ಲಿ ಭಾಗವಹಿಸಬೇಕು, ಎಷ್ಟು ಗಂಭೀರವಾಗಿ ಕಾರ್ಯಕಲಾಪಗಳಲ್ಲಿ ತೊಡಗಿಸಿಕೊಳ್ಳಬೇಕು, ಎಂಬಿತ್ಯಾದಿಗಳನ್ನು ನಾವು ತೀರ್ಮಾನ ಮಾಡಿಕೊಳ್ಳಬೇಕು. ಎರಡನೆಯದಾಗಿ ಖರ್ಚಿನ ಬಾಬತ್ತನ್ನು ಕೂಡ ನಮ್ಮ ಸ್ನೇಹಿತರು ಹೇಳಿದ್ದಾರೆ. ನನಗೆ ಬಂದಿರುವ ಮಾಹಿತಿಗಳ ಪ್ರಕಾರ ಔರಾದ್‌ನ ನಮ್ಮ ಸ್ನೇಹಿತರಿಗೆ ಒಂದು ಸಭೆಗೆ 18 ಸಾವಿರ ರೂಪಾಯಿಗಳ ಟಿಎ. ಡಿಎ.ದೊರಕುತ್ತದೆ. ಅಷ್ಟು ಹಣ ನನಗೆ ಬರುವುದಿಲ್ಲ. ನಾನು ಕೇವಲ 70 ಕಿ.ಮೀ. ಅಂತರದಲ್ಲಿರುವುದರಿಂದ ನಮಗೆ ಯಾವ ಹೆಚ್ಚಿನ ಅನುಕೂಲಗಳು ಇಲ್ಲ. ಇದರ ಅರ್ಥ ಏನೆಂದರೆ ಒಂದು ಸಭೆಗೆ ಲಕ್ಷಾಂತರ ರೂಪಾಯಿಗಳ ಹಣವು ಖರ್ಚಾಗುತ್ತದೆ. ಮೂರನೆಯ ಹಾಗೂ ಪ್ರಮುಖವಾದ ವಿಷಯವೆಂದರೆ ಗುಣಮಟ್ಟದ ವರದಿಗಳನ್ನು ಕೊಡುವಲ್ಲಿ ನಾವುಗಳು ಸಂಪೂರ್ಣವಾಗಿ ಸಫಲರಾಗಿಲ್ಲ ಎನ್ನುವುದು. ಅದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. 1983ನೇ ಇಸವಿಯಿಂದ ನಾನು ಈ ಸದನದ ಸಮಿತಿಗಳಲ್ಲಿ ಭಾಗವಹಿಸಿದ್ದೇನೆ. ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ, ವರದಿಗಳನ್ನು ಕೊಟ್ಟಿದ್ದೇನೆ. ಈಗ ಕೂಡ ಅಂಥ ಒಂದು ವರದಿಯನ್ನು ಗಂಭೀರವಾಗಿ ಓದುತ್ತಾ ಕುಳಿತಿದ್ದೆನು. ಗುಣಮಟ್ಟ ಕೆಟ್ಟಿದೆಯೋ, ಏನೋ ಒಂಬ ಒಂದು ಮಾತನ್ನು ಬಿಟ್ಟರೆ, ಕೊನೆಯದು ಕೊಡುವಂಥ ವರದಿಯನ್ನು ಯಾರೇ ಗಂಭೀರವಾಗಿ ಪರಿಶೀಲನೆ ಮಾಡುವುದಿಲ್ಲ, ಅದರ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂಬ ಮಾತನ್ನು, ಸತ್ಯವಾದ ಮಾತುಗಳನ್ನು ಹೇಳಿದ್ದಾರೆ. ಯಾವ ಸಮಿತಿಯ ವರದಿಯನ್ನು ಯಾವ ಸರಕಾರ ಗಂಭೀರವಾಗಿ ಪರಿಶೀಲನೆ ಮಾಡಿ, ಸಮಿತಿಯು ಕೊಟ್ಟಂಥ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಂಡಿಲ್ಲ. ನಾನು ಈಗ ಕೃಷ್ಣ ಮೇಲ್ದಂಡೆ ಯೋಜನೆಯ ಕುರಿತು ಮಾನ್ಯ ವೈಜನಾಥ ಪಾಟೀಲ್‌ರವರ ವರದಿಯನ್ನು ಓದುತ್ತಾ ಕುಳಿತಿದ್ದೆ. ಅದರಲ್ಲಿ ನೂರೆಂಟು ಅವ್ಯವಹಾರಗಳು ಆಗಿವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಲಕ್ಷಾಂತರ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಹೆಳಿದ್ದಾರೆ. ಇದನ್ನು ಸಿಬಿಐ ವಿಚಾರಣೆಗೆ ಒಳಪಡಿಸಬೇಕೆಂದು ಆಡಳಿತ ಪಕ್ಷದ ಅಧ್ಯಕ್ಷರಾಗಿದ್ದಂಥ ವೈಜನಾಥ ಪಾಟೀಲರವರು ಅತ್ಯಂತ ಶ್ರಮದಿಂದ ಸರಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆಡಳಿತ ಪಕ್ಷದ ಹಿರಿಯ ಸದಸ್ಯರು, ಸಮಿತಿಯ ಅಧ್ಯಕ್ಷರು ಆಗಿದ್ದ ಶ್ರೀ ವೈಜನಾಥ ಪಾಟೀಲರು ಸಿಬಿಐ. ತನಿಖೆಗೆ ಆಜ್ಞೆ ಮಾಡಿ ಎಂದು ಸ್ಪಷ್ಟವಾಗಿ ವರದಿಯಲ್ಲಿ ಹೇಳಿದ್ದಾರೆ. ಆಗಿನ ಸರಕಾರದವರು ತಮ್ಮ ಕಾಲಾವಧಿಯಲ್ಲಿ ಅದನ್ನು ಮಾಡಲಿಲ್ಲ. ಈಗ ನಮ್ಮನ್ನು ಮಾಡಿ ಎಂದು ಕೇಳಿಕೊಳ್ಳುವುದಕ್ಕಿಂತ ಮೊದಲು ಯಾವುದಾದರೂ ಒಂದು ವರದಿಯ ಆಧಾರದ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ಕೇಳಲಿಚ್ಛಿಸುತ್ತೇನೆ. ಆದ್ದರಿಂದ ಇಂಥ ವಿಚಾರಗಳ ಮೇಲೆ ಯಾವ ಸರಕಾರವು ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ರೆಮಿಡಿಯಲ್ ಮೆಜರ್ಸ್ ಎಂದು ಹೇಳಿ ಕೊಂಡು ಕುಳಿತರೆ ಆಗುವುದಿಲ್ಲ ಎಂಬ ಒಂದು

ಮಾತನ್ನು ಹೇಳಬಯಸುತ್ತೇನೆ. ಪ್ರತಿಯೊಂದು ವರದಿಯನ್ನು ಕೂಡ ಸದನದ ಮುಂದೆ ಪ್ರಸ್ತಾಪ ಮಾಡಿ ಅದರ ಬಗ್ಗೆ ಚರ್ಚೆ ಮಾಡುವಂಥ ಕ್ರಮವನ್ನು ತಾವುಗಳು ಕೈಗೊಳ್ಳಬೇಕು. ಅದಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಆಫ್ ಪ್ರೊಸೀಜರ್ಸ್‌ನಲ್ಲಿ ಬದಲಾವಣೆಗಳನ್ನು ತರಬೇಕು. ಈ ವರದಿಗಳಿಗೆ ಏನಾದರೂ ಬೆಲೆ ದೊರಕಬೇಕಾದರೆ, ಕಿಮ್ಮತ್ತು ಸಿಗಬೇಕಾದರೆ, ಎಲ್ಲಾ ವರದಿಗಳ ಬಗ್ಗೆ ಒಂದು ವಾರ್ಷಿಕ ವರದಿಯನ್ನು ತಯಾರು ಮಾಡಿ, ಸದನದ ಮುಂದೆ ತಂದು, ಅದರ ಬಗ್ಗೆ ಚರ್ಚೆ ಮಾಡುವಂಥ ಕ್ರಮವನ್ನು ತಾವುಗಳು ತೆಗೆದುಕೊಂಡರೆ, 25 ವರ್ಷಗಳಿಂದ ನನ್ನ ತಲೆ ಕೊರೆಯುತ್ತಿದ್ದಂಥ ಸಮಸ್ಯೆಗೆ ಪರಿಹಾರವು ಸಿಗುತ್ತದೆ. ಎಲ್ಲಾ ಸ್ನೇಹಿತರುಗಳು ಹೇಳಿದಂತೆ ಈ ಸಮಿತಿಗಳಿಂದ, ಅವುಗಳ ವರದಿಗಳಿಂದ ಯಾವ ಪ್ರಯೋಜನವೂ ಆಗುತ್ತಾ ಇಲ್ಲ. ಇದು ಪ್ರಯೋಜನಕ್ಕೆ ಬರಬೇಕೆನ್ನುವುದಾದರೆ ತಮ್ಮ ಕಾಲದಲ್ಲಿ, ಈ ಸರಕಾರವಿದ್ದಾಗ, ಈ ವರದಿಗಳ ಮೇಲೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಲು ಏರ್ಪಾಡು ಮಾಡಲಿಕ್ಕೆ ಅವಶ್ಯಕತೆ ಬಿದ್ದರೆ ಕಾನೂನನ್ನಾದರೂ ಬದಲಾವಣೆ ಮಾಡುವಂಥ ಕೆಲಸವನ್ನು ನೀವು ಮಾಡುವುದಾದರೆ, 15 ಜನ ಸದಸ್ಯರಲ್ಲಿ, ಇನ್ನೂ ಹೆಚ್ಚು ಮಾಡಲಿ, ಅದಕ್ಕೆ ನಾವು ಕೈ ಎತ್ತುತ್ತೇವೆ. ಆದರೆ ಸದಸ್ಯರ ಸಂಖ್ಯೆಯನ್ನು ಮಾತ್ರ ಹೆಚ್ಚು ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇದನ್ನು ಗಂಭೀರವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗಾಗಲೇ ಎಲ್ಲಾ ಸದಸ್ಯರುಗಳವರು ಗಂಭೀರವಾದ ಪ್ರಶ್ನೆಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಚಿಂತನೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮುಂದಿನ ಬಿಎಸಿ ಸಭೆಯಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಇರುತ್ತಾರೆ, ಅಲ್ಲಿ ಯಾವ ರೀತಿಯಲ್ಲಿ ಇದನ್ನು ಮುಂದುವರಿಸಿಕೊಂಡು ಹೋಗಬಹುದು ಎಂಬ ಬಗ್ಗೆ, ಸದನದಲ್ಲಿ ಪ್ರಸ್ತಾಪಿಸಿದ ಪ್ರಶ್ನೆಗಳ ಬಗ್ಗೆ ಹಾಗೂ ಮತ್ತಿತರ ವಿಚಾರಗಳ ಬಗ್ಗೆ ಯಾವರೀತಿಯ ಔಷಧಿಯನ್ನು ಕಂಡುಹಿಡಿಯ ಬೇಕೆಂಬ ಬಗ್ಗೆ ಬಿಎಸಿ ಮೀಟಿಂಗ್‌ನಲ್ಲಿ ಪ್ರಸ್ತಾಪಿಸುತ್ತೇನೆ. ಜೊತೆಗೆ ಬಹುಶ: ಚಂದ್ರೇಗೌಡರಿಗೆ ಜ್ಞಾಪಕ ಇದೆ, ಶ್ರೀಮಾನ್ ಎಸ್.ಎಂ.ಕೃಷ್ಣರವರು ಈ ಅಧ್ಯಕ್ಷ ಪೀಠದಲ್ಲಿದ್ದಾಗ ಸಬ್ಜೆಕ್ಟ್ ಕಮಿಟಿ ಮಾಡಬೇಕೆಂದು ಹೇಳಿ ನನ್ನನ್ನೇ ಛೇರ್ಮನ್ ಮಾಡಿ ಅದರಲ್ಲಿ ಭೈರೇಗೌಡರು, ಯಡಿಯೂರಪ್ಪನವರು, ಚಂದ್ರೇಗೌಡರು ನಾವು ನಾಲ್ಕು ಜನ ಇದ್ದೆವು. ಸುಮಾರು ಒಂದೂವರೆ ವರ್ಷಗಳ ಕಾಲ ದಿನಕ್ಕೆ ಮೂರು ಗಂಟೆಗಳ ಕಾಲ ಎಲ್ಲರೂ ಕುಳಿತುಕೊಳ್ಳುತ್ತಿದ್ದೆವು. ಭೈರೇಗೌಡರಂತೂ ಆವರು ಒಂದು ಮೀಟಿಂಗನ್ನೂ ತಪ್ಪಿಸಿಕೊಂಡಿಲ್ಲ. ಭೈರೇಗೌಡರದು ಬೆಸ್ಟ್ ಅಟೆಂಡೆನ್ಸ್. ನಾವು ನಾಲ್ಕು ಜನರು ಸುಮಾರು ಒಂದೂವರೆ ವರ್ಷಗಳ ಕಾಲ ಮೀಟಿಂಗನ್ನು ನಡೆಸಿ ವರದಿಯನ್ನು ಕೊಟ್ಟೆವು. ನಂತರ ಆ ಸಬ್ಜೆಕ್ಟ್ ಕಮಿಟಿ ಏತಕ್ಕೆ ಛೇಂಜ್ ಆಯಿತೋ ನನಗೆ ಅರ್ಥವಾಗುತ್ತಿಲ್ಲ. ಇದು ಬಹುಶಃ ಅಧಿಕಾರಿಗಳ ಅನುಕೂಲಕ್ಕಾಯಿತೋ, ಬೇರೆ ಯಾವ ಕಾರಣಕ್ಕೆ ಅನುಕೂಲವಾಯಿತೋ ನನಗೆ ಅರ್ಥವಾಗುತ್ತಿಲ್ಲ. ಅದನ್ನು ಸಹ ನಾವು ಸಮಗ್ರವಾಗಿ ಯಾವ ರೀತಿ ಮುಂದುವರಿಸಬೇಕು ಎನ್ನುವುದಕ್ಕೆ ಅದರ ಬಗ್ಗೆಯೂ ನಾನು ಬಿಎಸಿ ಮೀಟಿಂಗ್‌ನಲ್ಲಿ ಹೇಳುತ್ತೇನೆ. ಎರಡನೆಯದಾಗಿ, ನಮ್ಮ ಸದಸ್ಯರ ಅಟೆಂಡೆನ್ಸ್ ಇದೆಯಲ್ಲ ಅದು ಬಹಳ ಕಡಿಮೆ ಇದೆ. ನಿಮಗೆಲ್ಲಾ ಗೊತ್ತಿರುವ ಹಾಗೆ ನಾನು ಈಗ 1 ಗಂಟೆಗೆ ಅಡ್ಜರ್ನ್ ಮಾಡಿ ಎರಡು ಗಂಟೆಗೆ

ಸೇರಬೇಕೆಂದರೆ ಅರ್ಧ ಗಂಟೆ ಬೆಲ್ ಹೊಡೆಯುತ್ತದೆ. ನಾವು ಅಧಿಕಾರಿಗಳಿಗೆಲ್ಲ ಪಂಚಿಂಗ್ ಸಿಸ್ಟಂನ್ನು ಇಸ್ಯೂ ಮಾಡುತ್ತೇವೆ, ನಮ್ಮ ಸದಸ್ಯರಿಗೂ ಅದು ಬರುವುದು ನ್ಯಾಯವಲ್ಲವೇ? ಸರಿಯಾದ ಟೈಂನ್ನು ಫಿಕ್ಸ್ ಮಾಡಬೇಕು. That is why I am thinking, with the permission of the Members, to introduce punching system to members also. ಇದರ ಬಗ್ಗೆ ಯೋಚನೆ ಮಾಡಿನೋಡಿ. ಇದು ಯಾರಿಗೆ ಬೇಡವೋ ಅಥವಾ ಯಾರಿಗೆ ಬೇಕಾಗಿದೆ ಎಂಬುದರ ಬಗ್ಗೆ ತಾವು ಉತ್ತರವನ್ನು ಬರೆಯಿರಿ. ಅದನ್ನು ನೋಡಿಕೊಂಡು ನಿಮ್ಮಗಳ ಅನುಮತಿಯನ್ನು ತೆಗೆದುಕೊಂಡು ಸದಸ್ಯರ ಸಲಹೆಯಂತೆ ನಾನು ಮುಂದುವರಿಯುತ್ತೇನೆ. ಜನರು ನಿಮ್ಮನ್ನೆಲ್ಲಾ ಏತಕ್ಕೆ ಸದನಕ್ಕೆ ಕಳುಹಿಸಿದ್ದಾರೆ?

Sri.K.N.Subbareddy: Self-imposed restriction; ಅದು ಒಳ್ಳೆಯದು.

ಅಧ್ಯಕ್ಷರು: ನೀವು ಉತ್ತರ ಬರೆಯಿರಿ. With the permission of the members ಎಂದು ಹೇಳುತ್ತಿದ್ದೇನಲ್ಲ. ಅದಕ್ಕೋಸ್ಕರ ಈ ಎಲ್ಲಾ ಚಿಂತನೆಗಳ ಬಗ್ಗೆ ನಾವು ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ನೀವು ಬರೆಯಿರಿ. ನಾನೇನು ಈಗಲೇ ಅದನ್ನು ಮಾಡಬೇಕೆಂದು ಹೇಳುತ್ತಿಲ್ಲ. ನನಗೆ ಆ ರೀತಿ ಚಿಂತನೆಯಾಗುತ್ತಿದೆ. ನೋಡೋಣ, ಸದಸ್ಯರ ಗೌರವಕ್ಕೆ ಪಂಚಿಂಗ್ ಸಿಸ್ಟಂ ಇಡುವುದು ನ್ಯಾಯವಲ್ಲ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ತಾವುಗಳು ಕೂಡ ಅದೇ ರೀತಿ ಸಮಯಕ್ಕೆ ಸರಿಯಾಗಿ ಬರಬೇಕಲ್ಲ. ನಮ್ಮ ವಿಧಾನಮಂಡಲದ ಕಾರ್ಯಾಲಯದಲ್ಲೂ ಪಂಚಿಂಗ್ ಸಿಸ್ಟಂನ್ನು ಇಂಟ್ರಡ್ಯೂಸ್ ಮಾಡುತ್ತಿದ್ದೇವೆ. ವಿಧಾನಸೌಧದ ಎಲ್ಲಾ ಕಾರ್ಯಾಲಯಗಳಲ್ಲೂ ಪಂಚಿಂಗ್ ಸಿಸ್ಟಂ ಇರುವಾಗ ನಮ್ಮ ಸೆಕ್ರೆಟೇರಿಯೆಟ್‌ಗೆ ಏಕೆ ಮಾಡಬಾರದು ಎಂದು ಹೇಳಿ. I have already decided to introduce punching system to our secretariat officers also.

ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ನಿಜವಾಗಿ ತಾವು ತೆಗೆದುಕೊಳ್ಳುತ್ತಿರುವ ನಿರ್ಣಯ ಬಹಳ ಉತ್ತಮವಾದ ನಿರ್ಣಯ, ಒಮ್ಮೊಮ್ಮೆ ಇಲ್ಲಿ ಮಾತನಾಡುವವರಿಗೆ ಒಳ್ಳೆಯ ವಿಷಯಗಳಿರುತ್ತವೆ. ಆ ಕಡೆ ಮಂತ್ರಿಗಳೂ ಇರುವುದಿಲ್ಲ. ಆ ಕಡೆ ಸದಸ್ಯರೂ ಇರುವುದಿಲ್ಲ, ಈ ಕಡೆಯೂ ಸದಸ್ಯರು ಇರುವುದಿಲ್ಲ. ಏನು ಮಾತನಾಡುವುದು? ಇದನ್ನು ನಾವು ಕಳೆದ ಅಧಿವೇಶನದಲ್ಲೂ ಅನುಭವಿಸಿದ್ದೇವೆ. ಇವತ್ತು ಇದನ್ನೇ ಅನುಭವಿಸುತ್ತಿದ್ದೇವೆ. ದಯವಿಟ್ಟು ತಾವು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು. ಸದಸ್ಯರ ಪರ್ಮಿಷನ್ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಏಕೆ ಹೇಳುತ್ತೀರಿ?

ಅಧ್ಯಕ್ಷರು: ಸದಸ್ಯರ ಸಲಹೆಯಂತೆ, ಯಾರ್ಯಾರಿಂದ ಏನೇನು ಸಲಹೆ ಬರುತ್ತದೆ ಎಂದು ನೋಡೋಣ.

ಶ್ರೀ ಎಸ್.ಎಸ್.ಪಾಟೀಲ್: ಇದರ ಬಗ್ಗೆ ತಾವು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಿ. ಹಾಜರಾತಿ ಕನಿಷ್ಠ 80 ಪರ್‌ಸೆಂಟ್ ಆದರೂ ಇರುವ ಹಾಗೆ ತಾವು ವ್ಯವಸ್ಥೆ ಮಾಡಬೇಕು.

+ ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಅಧ್ಯಕ್ಷರೆ, ಸಮಿತಿಯು

ಕೊಡುವ ವರದಿಗಳಲ್ಲಿ ಬಹಳ ಗುರುತರವಾದ ಆಪಾದನೆಗಳೂ ಇರುತ್ತವೆ. ಅನೇಕ ಲೋಪದೋಷಗಳು ಕೂಡ ಇರುತ್ತವೆ. ನಾವುಗಳು ವಿವರವಾಗಿ ಚರ್ಚೆ ಮಾಡಿ ವರದಿಯನ್ನು ಕೊಡುತ್ತೇವೆ. ವರದಿಯನ್ನು ಕೊಟ್ಟಮೇಲೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡರು ಎಂದು ಗೊತ್ತಾಗುವುದಿಲ್ಲ. ಇದು ಸದಸ್ಯರಿಗೂ ಗೊತ್ತಾಗುವುದಿಲ್ಲ, ಜನರಿಗೂ ಗೊತ್ತಾಗುವುದಿಲ್ಲ. ಅದರ ಬದಲು ವರದಿ ಕೊಟ್ಟಮೇಲೆ ಕೊನೆಯಪಕ್ಷ ಒಂದು ದಿವಸವೋ, ಒಂದು ಗಂಟೆಯೋ ಅಥವಾ ಎರಡು ದಿವಸವೋ ಅದನ್ನು ಚರ್ಚೆಗೆ ಇಡಬೇಕು. ಸಂಬಂಧಪಟ್ಟ ವರದಿ ಮೇಲೆ ಸಂಬಂಧಪಟ್ಟ ಮಂತ್ರಿಯವರು ರಿಪ್ಲೈಯನ್ನು ಕೊಡಬೇಕಾಗುತ್ತದೆ. ಏನು ಕ್ರಮ ತೆಗೆದುಕೊಂಡಿದ್ದೇವೆ, ಏನು ತೆಗೆದುಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಇದನ್ನು ಇಂಟ್ರಡ್ಯೂಸ್ ಮಾಡಿದರೆ ಬಹುಶಃ ಖರ್ಚು ಮಾಡಿದ ಹಣಕ್ಕೂ ಸಾರ್ಥಕವಾಗುತ್ತದೆ. ಅಧಿಕಾರಿಗಳು ಕೂಡ ಎಚ್ಚರಿಕೆಯಿಂದ ಇರುತ್ತಾರೆ. ರಿಪೋರ್ಟ್‌ನ್ನು ಕೊಡುತ್ತಾರೆ, ರಿಪೋರ್ಟ್ ಮಂತ್ರಿಗಳ ಗಮನಕ್ಕೂ ಬರುತ್ತದೆ, ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಒಂದು ಭಯ ಕೂಡ ಬರುತ್ತದೆ. ಆ ರೀತಿ ಅದನ್ನು ಇಂಟ್ರಡ್ಯೂಸ್ ಮಾಡಿದರೆ ಎಫೆಕ್ಟೀವ್ ಆಗುತ್ತದೆ ಎಂದು ನನ್ನ ಅಭಿಪ್ರಾಯ.

+ ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ ಈ ವಿಧಾನಮಂಡಲದ ಸಮಿತಿಗಳ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಸರಳ ಪ್ರಸ್ತಾವಕ್ಕೆ ಸಾಕಷ್ಟು ಪ್ರತಿಕ್ರಿಯೆ, ಸಲಹೆಗಳೂ ಬಂದಿವೆ; ಸೂಕ್ತ ಮಾರ್ಗದರ್ಶನವನ್ನೂ ಮಾಡಿದ್ದಾರೆ. ಅದಕ್ಕಾಗಿ ನಾನು ಸದಸ್ಯರುಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಮುಖವಾಗಿ ಸಮಿತಿಗಳನ್ನು ಹೆಚ್ಚು ಮಾಡುವುದರಿಂದ ಗುಣಾತ್ಮಕ ಬದಲಾವಣೆಗಳಾಗುವುದಿಲ್ಲ ಎನ್ನುವಂಥದ್ದು ಶ್ರೀಮಾನ್ ಸಿಂಧ್ಯಾರವರ ವಾದ. ಈ ವಾದವನ್ನು ನಾನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣವೇನೆಂದರೆ, ಅನೇಕ ಜನ ಹೊಸ ಹೊಸ ಸದಸ್ಯರುಗಳು ಬಂದಿದ್ದಾರೆ, ನಾನೇ ಒಂದು ಸಾರಿ ಅವರಿಗೆ ಕೇಳುತ್ತಿದ್ದೆ. ನಾವು ಹಿಂದೆ ಸದನದಲ್ಲಿ ಕುಳಿತಾಗ ಅನೇಕ ಜನ ಕಿರಿಯ ಸದಸ್ಯರ ಪಾಲುದಾರಿಕೆ ಕಂಡು ಮೆಚ್ಚುಗೆ ವ್ಯಕ್ತಮಾಡಿದ್ದೆ. ಆ ಭಾಗದಲ್ಲೂ ಅನೇಕ ಜನ ಇದ್ದಾರೆ. ಅಂಥವರಿಗೆ ಸ್ವಲ್ಪ ಅವಕಾಶಗಳು ಹೆಚ್ಚಿಗೆ ಸಿಕ್ಕಿದರೆ ಇಂಥ ಸಾರ್ವಜನಿಕ ಹಿತದ ರಕ್ಷಣೆಯ ಜವಾಬ್ದಾರಿಯನ್ನು ಹೊರತಕ್ಕಂಥ ಸಮಿತಿಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶಗಳು ಸಿಕ್ಕಿದರೆ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಿಕೊಡಬಹುದು. ಹೆಚ್ಚು ಜ್ಞಾನವನ್ನು ಸಂಪಾದನೆ ಮಾಡಬಹುದು. ಹೆಚ್ಚು ಅನುಭವವನ್ನು ಪಡೆಯಬಹುದು ಎನ್ನುವುದು ನಿರ್ವಿವಾದ ಮಾತು. ಆ ದೃಷ್ಟಿಯಿಂದ ಈಗ 62 ಜನ ಒಟ್ಟು ಸಮಿತಿಗಳಲ್ಲಿ ಸದಸ್ಯರೇನಿದ್ದಾರೆ, ಅದಕ್ಕೆ 13 ಜನ ಹೆಚ್ಚು ಸದಸ್ಯರನ್ನು ಸೇರಿಸಬೇಕೆಂದು ಪ್ರಯತ್ನ ಮಾಡಿದ್ದೇವೆಯೇ ಹೊರತು ಬೇರೆ ಏನೂ ಕಾರಣ ಇಲ್ಲ. ಮತ್ತೊಂದು ಏನೆಂದರೆ ಖಾಸಗಿ ನಿರ್ಣಯ ಅಥವಾ ಖಾಸಗಿ ಶಾಸನದ ರಚನೆ, ಅದೊಂದು ವಿಶೇಷವಾದಂಥ ಸದಸ್ಯರಿಗೆ ಇರತಕ್ಕಂಥ ಗೌರವ, ಪ್ರತಿಷ್ಠೆ, ಜೊತೆಗೆ ಅವರಲ್ಲಿರತಕ್ಕ ಆಳವಾದ ಅನುಭವ ಎಲ್ಲಾದರೂ ಒಂದು ಕಡೆ ಹೊರಬರಬೇಕೆಂದರೆ ಇದಕ್ಕಿಂತ ದೊಡ್ಡ ಅವಕಾಶ ಮತ್ತೊಂದಿಲ್ಲ. ಆದರೆ ದುರದೃಷ್ಟದಿಂದ ಅದನ್ನು ಯಾರೂ ಬಳಕೆ ಮಾಡಿಕೊಳ್ಳುತ್ತಿಲ್ಲ. ಪ್ರತಿ ಶುಕ್ರವಾರ ಯಾವುದೇ ಕಾರಣಕ್ಕೂ ಶಾಸಗಿ ನಿರ್ಣಯದ ಮೇಲೆ ಚರ್ಚೆಯನ್ನು ನಾವು ಇದ್ದ ಕಾಲದಲ್ಲಿ ಶುಕ್ರವಾರದ ದಿವಸ, ಅದು ಇರಲಿ ಇಲ್ಲದೇ ಇರಲಿ, ಖಾಸಗಿ ನಿರ್ಣಯಗಳ ಬಗ್ಗೆ ಚರ್ಚೆಗೆ ಎಂದು ಹೇಳಿ ವಿಶೇಷವಾಗಿ ಆ ಒಂದು ದಿನವನ್ನು ನಿಗದಿ ಮಾಡಿದ್ದೇವೆ. ಆದರೆ ಆ ದಿನವನ್ನು ನಿಗದಿ ಮಾಡಿದ್ದೇವೆ, ಶಾಸನಗಳು ಬರಬೇಕಲ್ಲ. ಅದು ಬಾರದೇ ಇದ್ದಾಗ ನಾವು ಯಾವ ರೀತಿ ಹೊಸ ಸದಸ್ಯರಿಗೆ ಅದರ ಅನುಭವವನ್ನು ಕೊಡಬಹುದು ಎನ್ನುವ ಆಲೋಚನೆಯನ್ನು

ನಾನು ಮಾಡಿದ್ದೇನೆ. ಒಂದೆರಡು ಶಾಸನಗಳು ಹೊರ ಬರಬಹುದು ಎಂದು ಕಾಣುತ್ತದೆ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೆ, ತಮಗೆ ಜ್ಞಾಪಕವಿರಬಹುದು. ಕನ್ನಡ ನಾಡು ಎಂದು ಮಾಡಬೇಕೇ ಅಥವಾ ಕರ್ನಾಟಕ ಎಂದು ಮಾಡಬೇಕೇ ಎಂದು ಶ್ರೀಮಾನ್ ಎಲ್.ಶ್ರೀಕಂಠಯ್ಯ ನವರು ಎಂಎಲ್ಎ ಇದ್ದಾಗ ಸುಮಾರು ಒಂದು ವರ್ಷಕಾಲ ಖಾಸಗಿ ನಿರ್ಣಯದ ಮೇಲೆ ಚರ್ಚೆ ನಡೆಯಿತು.

ಶ್ರೀ ಡಿ.ಬಿ.ಚಂದ್ರೇಗೌಡ: ಅದು ಆಯಿತು. ಶ್ರೀಮಾನ್ ಶ್ರೀನಿವಾಸ್‌ರವರದು ಪಾನನಿರೋಧದ ಬಗ್ಗೆ ಒಂದು ಶಾಸನ ಬಹಳ ಕಾಲ ಚರ್ಚೆಯಾಯಿತು. ಅದೇ ರೀತಿ ಗಡಿವಿವಾದದ ಬಗ್ಗೆಯೂ ಚರ್ಚೆಯಾಯಿತು. ಡಾ॥ ತಿಪ್ಪೇಸ್ವಾಮಿಯವರು ಬಹಳ ಮುಖ್ಯವಾಗಿ ಒಂದು ವಿಶೇಷವಾದ ಮಸೂದೆಯನ್ನು ತಂದಿದ್ದರು. ಅದರಲ್ಲಿ ಮೊಸಲಾತಿ ಕೆಲವೇ ಕುಟುಂಬಗಳಿಗೆ ಮೊಸಲಾಗಿಬಿಟ್ಟಿದೆ. ಇದನ್ನು ಮಿತಿಗೊಳಿಸಬೇಕೆಂದು ಹೇಳಿ ಅವರು ಎರಡು ಅಥವಾ ಮೂರನೇ ಪೀಳಿಗೆಗೆ ಇದನ್ನು ಮುಂದುವರಿಸಬಾರದು ಎನ್ನುವುದನ್ನು ಒಬ್ಬ ಹರಿಜನ ಗಿರಿಜನ ಹಿರಿಯ ಸದಸ್ಯರಾಗಿ ಬಹಳ ಮೇಧಾವಿಯಾಗಿ ಆ ಒಂದು ಶಾಸನವನ್ನು ತಂದಿದ್ದರು. ಅಂಥ ಶಾಸನಗಳು ಈಗ ಬರಬೇಕಾದ ಅಗತ್ಯ ಇದೆ. ಜೊತೆಗೆ ನಮ್ಮ ಕೃಷ್ಣಪ್ಪ ನವರು ಹೇಳಿದಹಾಗೆ ಖಾಸಗಿ ಶಾಸನವನ್ನು ಹಾಕಿದ್ದೀರಿ. ನಮಗೆ ಎಲ್ಲಿ ಕೆಲಸ. ಇಲ್ಲೂ ಇಲ್ಲ ದೆಹಲಿಗೆ ಹೋದರೆ ಅಲ್ಲೂ ಇಲ್ಲ. ಏನು ಮಾಡಬೇಕು ನಾವು ಎಂದು ಕೇಳಿದರೂ ಕೂಡ ಅದರ ಆಂತರ್ಯ ಕೆಲಸ ಮಾಡತಕ್ಕ ಸಮಿತಿಗೆ ಅವಕಾಶ ಕೊಡಿ ಎನ್ನುವ ಭಾವನೆಯನ್ನು ನಾನು ಅರ್ಥಮಾಡಿಕೊಂಡೆ. ಅದೇ ದೃಷ್ಟಿಯಿಂದಲೇ ನಾವು ಈ ಶಾಸನವನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮಾನ್ಯ ಸುಬ್ಬಾರೆಡ್ಡಿಯವರು ನಾನು ಯಾವ ಸಮಿತಿಯಲ್ಲೂ ಇಲ್ಲ ಎಂದು ಹೇಳಿದ್ದಾರೆ. ಅವರು ಸುಪ್ರೀಂ ಕೋರ್ಟ್ ಲಾಯರ್. ಅವರು ಬಹಳ ಹಿರಿಯರು ಕಮಿಟಿಗೆ ಹಾಕಿ ಅವರನ್ನು ಅವಮಾನ ಮಾಡುವುದು ಬೇಡ, ಅವರ ಕೆಲಸಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿ ಬಿಟ್ಟಿದ್ದು ಅಷ್ಟೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಈ ತೀರ್ಮಾನ ಅಧ್ಯಕ್ಷರಿಗೆ ಬಿಟ್ಟಿದ್ದು.

ಶ್ರೀ ಡಿ.ಬಿ.ಚಂದ್ರೇಗೌಡ: ಬೇಕಾದರೆ ತಮ್ಮಂಥ ಹಿರಿಯರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನಮಗೇನೂ ಅಭ್ಯಂತರವಿಲ್ಲ. ಆಮೇಲೆ ಆಕ್ಷನ್ ಟೇಕನ್ ರಿಪೋರ್ಟ್ ಮೇಲೆ ಮಾನ್ಯ ಜ್ಞಾನೇಂದ್ರರವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಎಲ್ಲಾ ಸದಸ್ಯರುಗಳದು ಒಂದು ಅಭಿಪ್ರಾಯವೇನೆಂದರೆ ಈ ಸಮಿತಿ ವರದಿಗೆ ಗೌರವ ಬರಬೇಕು, ಕ್ರಮ ತೆಗೆದುಕೊಳ್ಳಬೇಕು, ಈ ಸಮಿತಿಗಳ ವರದಿಗೆ ಮರ್ಯಾದೆ ಬರಬೇಕು. ಮೂಲಭೂತವಾಗಿ ಸಮಿತಿಗಳು ಎಂದರೆ ಸದನ ತಾನೇ ಕೂತು ಆ ಒಂದು ಕಮಿಟಿಯಲ್ಲಿ ಮಾಡತಕ್ಕ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ತನ್ನ ಪ್ರತಿನಿಧಿಯಾಗಿ ಸಮಿತಿಯನ್ನು ರಚನೆ ಮಾಡಿದೆ. ಆದ್ದರಿಂದ ಆ ವರದಿ ಸಮಿತಿ ವರದಿಯಲ್ಲ. ಅದು ಇಡೀ ಸದನದ ವರದಿಯಾಗುತ್ತದೆ. ಆ ಸದನದ ವರದಿಯಾದ ಕಾರಣ ನೀವು ಇಲ್ಲಿ ಏನು ಚರ್ಚೆ ಮಾಡಿ ಆ ಸದನ ವರದಿಯನ್ನು ಕೊಡುತ್ತದೋ ಅದಕ್ಕೆ ಸಿಕ್ಕಬೇಕಾದ ಎಲ್ಲಾ ಮಾನ್ಯತೆಗಳು ಯಾವ ಸರ್ಕಾರವಿದ್ದರೂ ಸಿಗಬೇಕು. ಅದು ಸಿಗದೇ

ಇರುವುದಕ್ಕೆ ಸಾಧ್ಯವೇ ಇಲ್ಲ. That becomes the property of the House. ಅದು ಸಿಗುವುದಿಲ್ಲವೆಂದು ಹೇಳಿ ಅಲ್ಲೊಂದು ಇಲ್ಲೊಂದು ಗುರುತು ಮಾಡಿ ನೀವು ಹೇಳುತ್ತೀರಿ, ಬುದ್ಧಿ ಹೇಳುವುದು ಸುಲಭ.

1.00 ಪಿಎಂ

ಮಾನ್ಯ ಭೈರೇಗೌಡರು ನನಗೆ ದೀರ್ಘವಾಗಿ ಬುದ್ಧಿ ಹೇಳಿದರು. ಸದನದ ಸಮಿತಿ ವರದಿಗೆ ಏನೂ ಬೆಲೆ ಬರುವುದಿಲ್ಲ ಎಂದು ಹೇಳಿದರು. ನಾನು ಕೇಳುತ್ತೇನೆ, ಮಾನ್ಯ ಭೈರೇಗೌಡರ ಕಾಲದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಅಂದಾಜು ಸಮಿತಿ ಮಾನ್ಯ ವೈಜನಾಥ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ರಚನೆ ಆಗಿತ್ತು. ಆಗ ಕ್ರಮ ಕೈಗೊಳ್ಳಲು ಏಕೆ ನೆನಪು ಬರಲಿಲ್ಲ? ಸಿಬಿಐ ತನಿಖೆ ಮಾಡಬೇಕು ಎಂದು ವರದಿಯಲ್ಲಿ ಹೇಳಿದ್ದರು. ಕನಿಷ್ಠ ತನಿಖೆ ಮಾಡಲು ಕೂಡ ಏಕೆ ಮನಸ್ಸು ಮಾಡಲಿಲ್ಲವೋ ನನಗೆ ಗೊತ್ತಿಲ್ಲ. ನೇರವಾಗಿ ಅವರೇ ಹೊಣೆಗಾರರು. ಆದ್ದರಿಂದ ಇಂತಹ ವಿಚಾರದಲ್ಲಿ ಡಿಸ್ಕ್ರಿಷನ್ ಸಿಬಿಐ ತನಿಖೆ ಮಾಡಿಸುವಾಗ ಮಾಡಲಿಲ್ಲ. ಈಗ ವಾದ ಮಾಡುತ್ತೀರಿ. ನಾನು ಅದಕ್ಕೇ ಹೇಳಿದೆ. ನೀವು ಸಿಬಿಐಗೆ ವಾದ ಮಾಡಿದಾಗ ಯಾವುದೇ ವಿಚಾರ ಬರಲಿ ಸಿಬಿಐ; ಅಯಿತು.ಸಿ.ಬಿ.ಐ.ಗೆ ರೆಫರ್ ಮಾಡೋಣ. ಸಿ ಓಡಿ ತನಿಖೆ ಮಾಡೋಣ; ಹೀಗೆ ಈ ಸರ್ಕಾರ ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಇದುವರೆಗೆ ಕೆಲಸ ಮಾಡಿಲ್ಲ ಎನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಸಮಿತಿಗಳಲ್ಲಿ ಅಥವಾ ಸದನದಲ್ಲಿ ಕಡ್ಡಾಯವಾಗಿ ಸದಸ್ಯರು ಇರಲೇಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ. ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಲೋಕಸಭಾದಲ್ಲಿ ಕೂಡ ಮಧ್ಯಾಹ್ನ ಆದ ಮೇಲೆ ಕೋರಂ ಬೆಲ್ ಒತ್ತುವುದನ್ನು ಈಗ ಬಿಟ್ಟುಬಿಟ್ಟಿದ್ದಾರೆ. ಲೋಕಸಭಾ ಸದಸ್ಯನಾಗಿ ನನ್ನ ಅನುಭವ ಹೇಳುತ್ತಿದ್ದೇನೆ. ಯಾವಾಗ ಎಷ್ಟು ಹೊತ್ತಿನಲ್ಲಿ ಮಾನ್ಯ ಸದಸ್ಯರು ಇರುತ್ತಾರೆ ಎಂದರೆ ಪ್ರಶ್ನೋತ್ತರ ವೇಳೆಯಲ್ಲಿ ಇರುತ್ತಾರೆ. ಆದಾದ ಮೇಲೆ ಶೂನ್ಯ ವೇಳೆಯಲ್ಲಿ ಇರುತ್ತಾರೆ. ಆ ಶೂನ್ಯ ವೇಳೆಯಲ್ಲೂ ನನಗೆ ಗೊತ್ತಿದ್ದ ಹಾಗೆ ಮಾನ್ಯ ಸದಸ್ಯರು ಸದನದ ಗಮನಕ್ಕೆ ತರುವುದಕ್ಕೆ ಒಂದು ವ್ಯವಸ್ಥೆ ಇತ್ತು. ಒಂದು ಪುಟದಷ್ಟು ಎಷ್ಟು ಬೇಕೋ ಅಷ್ಟೆಲ್ಲವನ್ನು ಅದರಲ್ಲಿ ಅಳವಡಿಸಿ ಅದನ್ನು ಸದನದ ಗಮನಕ್ಕೆ ತಂದು ಬಿಡುತ್ತಿದ್ದರು. ಅದು ಅಷ್ಟಕ್ಕೆ ನಿಂತು ಹೋಗುವುದು. ಆಮೇಲೆ ಅವರುಗಳು ಹೇಳಿದಂತಹ ಮಾತುಗಳು ಏನು ಇವೆ, ಸದನದಲ್ಲಿ ಬಳಕೆ ಮಾಡಿರುವಂತಹದು, ಆದರ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಇಲ್ಲಿ ನಮ್ಮ ಸಂಸತ್ತಿನ ಕಲಾಪ ಮಾಡತಕ್ಕವರು ಕಳುಹಿಸಿಕೊಡುವುದು. ಅವರು ಅಲ್ಲಿಂದ ಒಂದು ರಿಟನ್ ರಿಪ್ಲೈ ಕೊಡುವುದು. ಲಿಖಿತ ಮೂಲಕ ನೀವು ಹೀಗೆ ಹೇಳಿದ್ದೀರಿ, ನಾವು ಇಂತಹ ಕೆಲಸ ಮಾಡಿದ್ದೇವೆ ಎಂದು ಹೇಳುವುದು. ಈಗ ಏನಾಗುತ್ತದೆ? ಬೆಳಿಗ್ಗೆ ಪ್ರಶ್ನೆ ಕೇಳಿದ ತಕ್ಷಣ ಉತ್ತರ ಆಗಿಬಿಡಬೇಕು. ತಕ್ಷಣ ಕೊಟ್ಟುಬಿಡಿ ಎಂದು ಹೇಳುತ್ತಾರೆ. ಇದನ್ನು ನೋಡಿಯೇ ನಾವು ಆಗ 334ರ ವಿಧಿ ತಂದೆವು.

ಅಧ್ಯಕ್ಷರು: ಈಗ 351ರ ನಿಯಮ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಈಗ ಅದು 351 ಆಗಿ ಬದಲಾವಣೆ ಆಗಿದೆ. ಈಗ ತಕ್ಷಣ ಉತ್ತರ ಕೊಡಿ ಎಂದರೆ ಹೇಗೆ? ಏನು ಸ್ವಾಮಿ ಸರ್ಕಾರ ಕಲ್ಲು ಗುಂಡು ಹಾಗೆ ಕುಳಿತಿದೆ.

ಈಗಲೇ ಉತ್ತರ ಹೇಳಬೇಕು, ಮಂತ್ರಿಗಳು ಏನು ಮಾಡುತ್ತಾರೆ ಎಂದು ಕೇಳಿದರೆ ಯಾವ ಮನುಷ್ಯ ಮಾತ್ರದವರು ಒದಗಿಸುವುದಕ್ಕೆ ಆಗುವುದಿಲ್ಲ. ಅನೇಕ ಸಲ ಪ್ರಶ್ನೆಗಳನ್ನು ಕಳುಹಿಸಿರುತ್ತಾರೆ. ಸದಸ್ಯರುಗಳೇ ಬರುವುದಿಲ್ಲ.

ಅಧ್ಯಕ್ಷರು: ಇವತ್ತು ಎಂಟು ಜನ ಗೈರು ಹಾಜರಿ ಆಗಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ: ಈ ಪ್ರಶ್ನೆಯನ್ನು ಯಾರು ಕೇಳಬೇಕು? ಒಂದು ಪ್ರಶ್ನೆ ಮೇಲೆ ಎಷ್ಟು ವೆಚ್ಚ ಆಗುತ್ತದೆ ಎಂಬುದನ್ನು ಲೆಕ್ಕ ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಲೆಕ್ಕ ಮಾಡಿಸುತ್ತಿದ್ದಾರೆ; ಅದನ್ನು ನಿಮಗೆ ಕೊಡುತ್ತೇನೆ. ನಮಗೆ ಆ ಕಾಲದಲ್ಲಿ ಲೋಕಸಭೆಯಲ್ಲಿ ಒಂದು ಲಿಖಿತ ಮೂಲಕ ಪ್ರಶ್ನೆಗೆ ಉತ್ತರ ತರಿಸುವುದಕ್ಕೆ ಸುಮಾರು ಐದು ಲಕ್ಷ ರೂಪಾಯಿವರೆಗೆ ಖರ್ಚು ಬರುತ್ತದೆ ಎಂದು ಹೇಳುತ್ತಿದ್ದರು. ಈಗ ಅದೆಷ್ಟಾಗಿದೆಯೋ ಗೊತ್ತಿಲ್ಲ. ಆದ್ದರಿಂದ ಇಷ್ಟು ವೆಚ್ಚವಾಗಿ ಒಂದು ಪ್ರಶ್ನೆ ಇಲ್ಲಿಗೆ ಬಂದರೆ ಕೇಳಬೇಕು ಎನ್ನತಕ್ಕ ಸೌಜನ್ಯವೂ ಅವರಿಗಿಲ್ಲದೇ ಇದ್ದರೆ ಇಂತಹ ಜವಾಬ್ದಾರಿಗಳಿಂದ ನುಣುಚಿಕೊಳ್ಳತಕ್ಕಂಥಹ ಸದಸ್ಯರೂ ಇದ್ದಾರೆ. ಆದ್ದರಿಂದ ಇಲ್ಲಿ ಎಲ್ಲರೂ 80 ಪರ್ಸೆಂಟ್ ಬೇಕು ಎಂದು ನಮ್ಮ ಮಾನ್ಯ ಎಸ್.ಎಸ್.ಪಾಟೀಲ್ ಅವರು ಹೇಳುತ್ತಾರೆ. 80 ಪರ್ಸೆಂಟ್ ಸದಸ್ಯರು ಇರಬೇಕೆಂದು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಅವರೇ ತಿಳಿದುಕೊಳ್ಳಬೇಕು. ಇದಕ್ಕಿಂತಲೂ ಪ್ರಮುಖವಾದಂತಹ ಬೇರೆ ಒಂದು ಕೆಲಸ ಸದಸ್ಯರಿಗೆ ಇದೆ ಎಂದು ಹೇಳಿ ನಾನು ಯೋಚನೆ ಮಾಡಿಲ್ಲ. ಶ್ರೀಮಾನ್ ರಾಮಯ್ಯನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಸಿಬಿಐ ತನಿಖೆ ಏಕೆ ಮಾಡಲಿಲ್ಲ? ಅಲ್ಲಿ ಕಂಟ್ರಾಕ್ಟರ್‌ಗಳಿಗೆ...ಅವರು ಹೇಳಿದ್ದರಿಂದ ನಾನು ಹೇಳಿದೆ. ಆದ್ದರಿಂದ ಈ ಕಮಿಟಿಯೇ ಇರಬೇಕೇ ಅಥವಾ ಬೇಡವೇ ಎಂದು ನಮ್ಮ ಇಚ್ಛೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಈಲ್ಡ್ ಆದರೆ ನಾನು ಹೇಳುತ್ತೇನೆ. ಅವರು ಸಿಬಿಐ ತನಿಖೆಗೋಸ್ಕರ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಕೇಳುತ್ತೇನೆ. ತಾವು ಆಡಳಿತ ಪಕ್ಷದಲ್ಲಿದ್ದವರು. 1972ರಿಂದ ಇವರು ಆಡಳಿತ ಪಕ್ಷದಲ್ಲಿದ್ದಾರೆ. ಈ ಕಡೆ ಆ ಕಡೆ ಎರಡೂ ಕಡೆ, ಎರಡೂ ಸದನಗಳಲ್ಲಿ ಪಾರ್ಲಿಮೆಂಟಿನಲ್ಲಿ ಇದ್ದಂಥವರು. ತಾವು ಆಡಳಿತ ಪಕ್ಷದಲ್ಲಿದ್ದಾಗ ಬಂದಿರತಕ್ಕ ಎಲ್ಲಾ ವರದಿಗಳ ಬಗ್ಗೆ ಸಹಿತ ತಾವು ಕ್ರಮ ತೆಗೆದುಕೊಂಡಿದ್ದೀರೋ?

ಶ್ರೀ ವೈ.ಕೆ. ರಾಮಯ್ಯ: ನಾವು ಮಾಡಿಲ್ಲ, ನೀವು ಮಾಡಿಲ್ಲ ಎಂದು ಅರ್ಥ ಬೇರೆಯವರನ್ನು ದೂರುವುದರಲ್ಲಿ ಅರ್ಥ ಏನು ಇದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ವೈ.ಕೆ. ರಾಮಯ್ಯನವರು ಅನುಭವಸ್ಥರು. ನಾನು ಈಲ್ಡ್ ಆದರೆ ಅವರು ಮಾತನಾಡಬೇಕು. ಇಲ್ಲದಿದ್ದರೆ ನೀವೇ ಮಾತನಾಡಿ ಇಲ್ಲದಿದ್ದರೆ ಅರಚಿಕೊಂಡ ಹಾಗೆ ಆಗುತ್ತದೆ. ಅದೇನೂ ಉಪಯೋಗ ಆಗುವುದಿಲ್ಲ. ನಾನು ಮಾತನಾಡುವಾಗ ತಾವು ಸೌಜನ್ಯತೆ ತೋರಿಸಿ, ಆಮೇಲೆ ತಾವು ಮಾತನಾಡಿ. ನಾನು ಆವತ್ತೇ ಹೇಳಿದೆ. ನಿಮಗೆ ಅವರ ಹೆಸರು, ಅವರ ಸುದ್ದಿ ಇಲ್ಲದೇ ಹೋದರೆ ಉಸಿರಾಡುವುದಕ್ಕೆ ಆಗುವುದಿಲ್ಲವೇ ಎಂದು ಹೇಳಿದೆ. ಈಗ ನಿಮ್ಮ ಸರ್ಕಾರದವರು ಅದನ್ನು ನಾವು ಸಿಬಿಐಗೆ ಕೊಡುವುದಿಲ್ಲ, ನಾವೊಂದು ಉನ್ನತ ಅಧಿಕಾರಿಗಳ ಸಮಿತಿಯನ್ನು ಕಳಿಸಿದ್ದೇವೆ. ಅವರೆಲ್ಲಾ

ವಿಚಾರಣೆ ಮಾಡಿಕೊಂಡು ಬರುತ್ತಾರೆ. ಆದಾದಮೇಲೆ ತೀರ್ಮಾನ ತೆಗೆದುಕೊಂಡಿದ್ದೇವೆ ಎನ್ನತಕ್ಕ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಾರ್ತಾ ಮಂತ್ರಿಗಳು ಹೇಳಿದ್ದಾರೆ. ನಾವೆಲ್ಲೂ ಅದನ್ನು ಟೀಕೆ ಮಾಡುವುದಕ್ಕೆ ಹೋಗಿಲ್ಲ. ನೀವು ಮಾಡಿ ಅದನ್ನು. ನೀವೇನು ಹೇಳುತ್ತಿದ್ದೀರಿ? ನಾವು ಹೇಳಿದ್ದೇನು? ಸಮಿತಿಗಳು ಸರಿಯಾಗಿ ನಡೆಯಬೇಕು. ಗುಣಾತ್ಮಕವಾಗಿ ಇರತಕ್ಕ ವರದಿ ಬರಬೇಕು. ಮತ್ತು ಕೊಟ್ಟಿರತಕ್ಕ ವರದಿಗಳಲ್ಲಿ ರಾಜಕೀಯ ಪ್ರೇರಣೆ ಇರುವುದಿಲ್ಲ ಎನ್ನುವುದನ್ನು ಸಹಿತ ಹೇಳುವುದಕ್ಕೆ ಆಗುವುದಿಲ್ಲ. ಅನೇಕ ವರದಿಗಳಲ್ಲಿ ರಾಜಕೀಯ ಪ್ರೇರಣಾ ಇರತಕ್ಕದ್ದೂ ಇದೆ. ಮತ್ತೆ ಅನೇಕ ಸಂದರ್ಭಗಳಲ್ಲಿ ನಾವು ಅನೇಕ ಮುಖ್ಯ ಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲೂ ಅವತ್ತು ಅಡಳಿತ ನಡೆಸಿದವರನ್ನು, ಮುಖ್ಯಮಂತ್ರಿಗಳನ್ನು, ಅಡಳಿತ ಪಕ್ಷದವರನ್ನು ಎಂಬ್ರಾಸ್ ಮಾಡಬೇಕೆಂದು ಹೇಳಿ ಅಡಳಿತ ಪಕ್ಷದವರೇ ಒದ್ದಾಡಿರತಕ್ಕದ್ದನ್ನೂ ಸಹಿತ ನಾವು ನೋಡಿದ್ದೇವೆ. ವರದಿಗಳನ್ನು ಕೊಡತಕ್ಕ ಸಂದರ್ಭದಲ್ಲಿ ನಾವು ನೋಡಿದ್ದೇವೆ. ಇವೆಲ್ಲದರಲ್ಲಿಯೂ ಸಹಿತ ರಾಜಕೀಯ ಇರುತ್ತದೆ. ನಾವು ನಿಷ್ಪಕ್ಷಪಾತವಾಗಿ ಸದನದ ಗೌರವ ಹೆಚ್ಚಾಗಬೇಕು. ಗುಣತ್ಮಕವಾದ ವರದಿ ಬರಬೇಕು ಎಂದು ಹೇಳುವುದನ್ನು ನಾವು ಪ್ರಸ್ತಾಪ ಮಾಡಿದರೆ ಅದಕ್ಕೆ ತಾವು ರಾಜಕೀಯವಾಗಿ ಉತ್ತರ ಕೊಡುವುದಾದರೆ ನಾವು ಕೂಡ ರಾಜಕೀಯವಾಗಿ ಅದಕ್ಕೆ ಎದಿರೇಟನ್ನು ಕೊಡಲೇ ಬೇಕಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಇದರಲ್ಲಿ ರಾಜಕೀಯ ಉತ್ತರ ಏನು ಇದೆ? ನೀವು ಪ್ರಸ್ತಾಪ ಮಾಡದೇ ಇದ್ದಿದ್ದರೆ ನಾನು ಹೇಳುತ್ತಿರಲಿಲ್ಲ. ಒಂದು ನಮಗೆ ತಿಳಿದಿದ್ದಾದರೂ ಹೇಳಬೇಕಲ್ಲ. ಸಮಿತಿ ಬಂದಿದ್ದರೆ, ಆ ಸಮಿತಿ ವರದಿ ಏಕೆ ಜಾರಿ ಆಗಲಿಲ್ಲ? ಅನೇಕ ಸಂದರ್ಭಗಳಲ್ಲಿ ಆಗಿಲ್ಲ ಎಂದು ಕೇಳಿದರಲ್ಲ. ಹೀಗೆ ಅನೇಕ ಸಂದರ್ಭಗಳಲ್ಲಿ ಆಗಿದೆ. ಎಲ್ಲಾ ಕಾಲಕ್ಕೂ ಆಗಿಲ್ಲ ಎಂದು ಒಂದು ಉದಾಹರಣೆ ಹೇಳಿದೆ. ಅದರಲ್ಲಿ ರಾಜಕೀಯ ಏನು ಇದೆ?

ಶ್ರೀ ಎಸ್.ಎಸ್.ಪಾಟೀಲ್: ನಾನು 80 ಪರ್ಸೆಂಟ್ ಕೋರಂ ಇರಬೇಕು ಎಂಬ ವಿಚಾರ ಪ್ರಸ್ತಾಪ ಮಾಡಿದ್ದಕ್ಕೆ ತಾವು ಅದು ಅವರವರಿಗೆ ಬಿಟ್ಟಂತಹ ವಿಚಾರ ಎಂದು ತಾವು ಹೇಳಿದಿರಿ. ಪಂಚಾಯಿತಿ ಆಕ್ಟ್‌ನಲ್ಲಿ ತೆಗೆದುಕೊಂಡರೆ ಕನಿಷ್ಟ ಅರ್ಧದ ಮೇಲೆ ಕೋರಂ ಇರಬೇಕು ಎಂದು ನಿಬಂಧನೆ ಹಾಕಿದ್ದೇವೆ. ಸೊಸೈಟಿಯಲ್ಲಿ ನಿಬಂಧನೆ ಹಾಕಿದ್ದೇವೆ. ಇಲ್ಲಿ ನಮಗೇ ಅಧಿಕಾರ ಇರಬೇಕು ಎಂದು ಹೇಳಿ ಕನಿಷ್ಟ ಅರ್ಧಕ್ಕಿಂತ ಹೆಚ್ಚು ಎಂದು ಅದರೊಳಗಾದರೂ ಹಾಕಿಬಿಡಿ ಕೋರಂ ಇಟ್ಟುಬಿಡಿ. 20 ಅಥವಾ 22 ಮಂದಿ ಇದ್ದರೆ ಕೋರಂ ಆಯಿತು. ಇದು ಕೋರಂ ಸೊಸೈಟಿಗೆ ಅಲ್ಲಿ ಆಕ್ಟ್ ಇದೆ, ಪಂಚಾಯತಿಗೆ ಆಕ್ಟ್ ಇದೆ. ನಮಗೆ ಮಾತ್ರ ಆ ರಿಸ್ಟ್ರಿಕ್ಷನ್ ಇಲ್ಲ. ಇದು ಯಾವ ತತ್ವ?

ಶ್ರೀ ಡಿ.ಬಿ.ಚಂದ್ರೇಗೌಡ: ಮೊದಲು ವಿಪ್‌ಗಳಿಗೆ ಸಂಬಳ ಸಾರಿಗೆ ವ್ಯವಹಾರ ವ್ಯವಸ್ಥೆ ಇರಲಿಲ್ಲ. ಆದರೆ ಚುನಾವಣೆ ಐದು ವರ್ಷ ಕಳೆದ ಮೇಲೆ ಯಾವ್ಯಾವ ಸದಸ್ಯರು ಸದನದಲ್ಲಿ ಎಷ್ಟೆಷ್ಟು ದಿವಸ ಹಾಜರು ಇದ್ದರು? ಎಷ್ಟರಮಟ್ಟಿಗೆ ಅವರು ನಿಯಮಗಳನ್ನು ಪಾಲನೆ ಮಾಡಿ ಮಾತನಾಡಿದ್ದಾರೆ ಎನ್ನುವುದರ ಮಾಹಿತಿ ಇರುತ್ತಿತ್ತು. ಆ ಬೇಸಿಸ್ ಮೇಲೆ ಕಾಂಗ್ರೆಸ್ ಪಾರ್ಟಿ ಟಿಕೆಟ್ ವಿತರಣೆ ಆಗುತ್ತಿತ್ತು. ಆ ಕಾಲಕ್ಕೆ ಆಗುತ್ತಿತ್ತು. ಶ್ರೀಮಾನ್

ರಂಗನಾಥ್ ಅವರಿಗೆ ಗೊತ್ತು, ಮಾನ್ಯ ನಾಯಕರಿಗೆ ಗೊತ್ತು. ಈಗ ಅವ್ಯಾವುದೂ ಲೆಕ್ಕಕ್ಕೆ ಬರುತ್ತಿಲ್ಲ. ಆ ಲೆಕ್ಕ ಏನಿದೆ ಅದರಿಂದಲೇ ಬಲ ಹೆಚ್ಚಾಗಿ, ಸದನದಲ್ಲಿ ನನಗೆ ಗೊತ್ತು. ಮಾನ್ಯ ಹುಚ್ಚಮಾಸ್ತಿಗೌಡರು ಈಗಲೂ ಅವರದ್ದೇ ಟಿಕೆಟ್ ಹಂಚಿಕೆಯಲ್ಲಿ ಇದ್ದಾರೆ. ಇಲ್ಲ ಸ್ವಾಮಿ ಅವರು ಇಡೀ ಐದು ವರ್ಷ ಸದನಕ್ಕೆ ಬಂದೇ ಇಲ್ಲ ಎಂದರೆ ಅವರಿಗೆ ಟಿಕೆಟ್ ಇಲ್ಲ. ಇಂತಹ ಪ್ರಸಂಗಗಳು ನಡೆಯಿತು. ಆದ್ದರಿಂದ ಈಗ ಒತ್ತಾಯಕ್ಕೆ ಕರೆದುಕೊಂಡು ಕೂರಿಸಬೇಕಾದಂತಹ ಪ್ರಸಂಗ ಬಂದಿರುವುದರಿಂದ ಈ ವಿಚಾರಗಳನ್ನೆಲ್ಲಾ ಹೇಳಿದೆವು. ನಿಮ್ಮ ಸಲಹೆ ಒಳ್ಳೆಯದು.

ಶ್ರೀ ಎಸ್.ಎಸ್.ಪಾಟೀಲ್: ನಾವು ಸಾಮಾನ್ಯ ನೌಕರದಾರರಿಗಿಂತ ಹೆಚ್ಚು ಸಂಬಳವನ್ನು ನಾವು ಇವತ್ತು ತೆಗೆದುಕೊಳ್ಳುತ್ತಿದ್ದೇವೆ. ನಮಗೆ ಸಂಬಳ ಅಂತ ಕೊಡುತ್ತೀರಿ ಸಾರ್ವಜನಿಕರ ದುಡ್ಡು ತೆಗೆದಕೊಳ್ಳುತ್ತೇವೆ. ಆದ್ದರಿಂದ ನಮನ್ನು ಕೂಡ ಸ್ವಲ್ಪ ಜವಾಬ್ದಾರಿ ಇರಬೇಕಾಗುತ್ತದೆ. ಹಾಗೆ ನಾವು ಕಾರ್ಯವನ್ನು ಸರಿಯಾಗಿ ನಿರ್ವಹಿಸುವುದಿಲ್ಲ ಎಂದರೆ ಈಗ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಕಠಿಣ ಕ್ರಮ ಎಂದರೆ ಏನು? ಯಾವ ರೀತಿ?

ಅಧ್ಯಕ್ಷರು: ಅದೆಲ್ಲಾ ಬೇಡಿ, ಸಲಹೆಯನ್ನು ತೆಗೆದುಕೊಳ್ಳೋಣ.

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಸಲಹೆ ಕೊಟ್ಟಿದ್ದೀರಿ ಬಿಸಿನೆಸ್ ಆಡ್ವೈಸರಿ ಕಮಿಟಿಯಲ್ಲಿ ಅವರು ಅದನ್ನು ಇಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ಒಂದು ಸಂಖ್ಯೆ ಹೆಚ್ಚಿಸುವ ಪ್ರಸ್ತಾವವನ್ನು ಸದನದ ಮುಂದೆ ಇಟ್ಟಿದ್ದೇನೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು, ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, "ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಈ ಕೆಳಕಂಡ ತಿದ್ದುಪಡಿ ಪ್ರಸ್ತಾವವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಕ್ರಮ ಸಂಖ್ಯೆ	ಸಮಿತಿಯ ಹೆಸರು	ವಿಧಾನಸಭಾ ಸದಸ್ಯರ ಒಟ್ಟು ಸಂಖ್ಯೆ	ವಿಧಾನಸಭಾಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಸೂಚಿಸಿರುವ ತಿದ್ದುಪಡಿ
1.	ಸಾರ್ವಜನಿಕ ಉದ್ದಿಮೆಗಳ ಸಮಿತಿ (ನಿಯಮ 271 (1) ಎ (ಆ)	13	15
2.	ಅಧೀನ ಶಾಸನ ರಚನಾ ಸಮಿತಿ (ನಿಯಮ 277)	12	15
3.	ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ (ನಿಯಮ 288)	13	15
4.	ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ (ನಿಯಮ 290)	12	5

5. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ 12 15
(ನಿಯಮ 305)

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

"ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಗೆ ಒಪ್ಪಿಗೆ ನೀಡಲಾಯಿತು

ಈಗ ಸಭೆಯು ಮುಂದುವರಿದು ಪುನಃ 2.15ಕ್ಕೆ ಸಮಾವೇಶಗೊಳ್ಳುತ್ತದೆ.

(ಸಭೆಯು 1.19ಕ್ಕೆ ಮುಕ್ತಾಯವಾಗಿ ಮತ್ತೆ 2.15ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪ) ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರ ಅಪ್ಪಣೆ ಮೇರೆಗೆ: ಸದನದಲ್ಲಿ ಹಾಜರಾತಿ ಕುರಿತು.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ತಾವು ಮಧ್ಯಾಹ್ನ ಒಂದು ಗಂಟೆಗೆ ಸದನವನ್ನು ಮುಂದೂಡಿದ ಸಂದರ್ಭದಲ್ಲಿ ಮತ್ತೆ 2-15 ಕ್ಕೆ ಸದನ ಸಮಾವೇಶವಾಗುವುದಾಗಿ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಸಮಯಕ್ಕೆ ಸರಿಯಾಗಿ ಹಾಜರಾಗಬೇಕೆಂದು ಹೇಳಿದ್ದೀರಿ. ವಿಶೇಷವಾಗಿ ಸರ್ಕಾರದವರಿಗೆ ಕಿವಿ ಹಿಂಡಿ ಹೇಳಿದ್ದೀರಿ. 2-15ರಿಂದ ಬೆಲ್ ಹಾಕಿ ಸುಮಾರು 45 ನಿಮಿಷಗಳಾದರೂ ಆಡಳಿತ ಪಕ್ಷದ ಮಂತ್ರಿಗಳು ಹಾಜರಾಗಿಲ್ಲ. ಒಂದು ಕಡೆ ಬಿ.ಎ.ಸಿ.ಮೀಟಿಂಗ್‌ನಲ್ಲಿ ಆಡಳಿತ ಪಕ್ಷದವರಿಗೆ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸಲು ವಿರೋಧ ಪಕ್ಷದವರು ಅವಕಾಶ ಮಾಡಿಕೊಡುತ್ತಿಲ್ಲವೆಂದು ಹೇಳುತ್ತಾರೆ. ಅನವಶ್ಯಕಾಗಿ ಹೆಚ್ಚು ಮಾತುಗಳನ್ನು ವಿರೋಧ ಪಕ್ಷದವರು ಆಡುತ್ತಾರೆಂದು ಹೇಳುತ್ತಾರೆ. ನಾವೆಲ್ಲರೂ ಜವಾಬ್ದಾರಿ ಇರುವವರೇ ಆಗಿದ್ದೇವೆ. ರಾಜ್ಯದ ಆಗುಹೋಗುಗಳ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಮುಕ್ಕಾಲು ಗಂಟೆಯಾದರೂ ಕೂಡ ಇಬ್ಬರು ರಾಜ್ಯ ಸಚಿವರನ್ನು ಬಿಟ್ಟರೆ ಬೇರೆ ಮಂತ್ರಿಗಳೇ ಬಂದಿಲ್ಲ. ಇದೊಂದು ಗಂಭೀರವಾದ ವಿಚಾರವಾಗಿದೆ. ನಾನು ಎಲ್ಲಾ ವಿರೋಧ ಪಕ್ಷದವರ ಪರವಾಗಿ ನಿಮ್ಮಲ್ಲಿ ಕಳಕಳಿ ಇಟ್ಟು ಕೇಳಿಕೊಳ್ಳುತ್ತೇನೆ. ನಾವಂತೂ ಮಂತ್ರಿಗಳ ಗೈರು ಹಾಜರಿ ಬಗ್ಗೆ ಹೇಳಿ ಹೇಳಿ ಹೇಳಿ ಸಾಕಾಗಿಹೋಗಿದೆ. ಆದುದರಿಂದ ನೀವು ಮುಖ್ಯಮಂತ್ರಿಗಳ ಜೊತೆ ಹಾಗೂ ಸಂಸದೀಯ ಸಚಿವರ ಜೊತೆ ಮಾತನಾಡಿಕೊಂಡು ಸರಿಯಾದ ಸಮಯವನ್ನು ನಿಗದಿ ಮಾಡಿ. ಅದನ್ನು ಮಾಡದೇ ಹೋದರೆ ಮತ್ತು ಇದೇ ರೀತಿಯಲ್ಲಿ ಸದನ ನಡೆದರೆ ನಾವೆಲ್ಲರೂ ಬಹಿಷ್ಕಾರ ಹಾಕಿ ಸದನದ ಹೊರಗಡೆ ಇರುತ್ತೇವೆ. ಈ ರೀತಿ ನಡೆದರೆ ಏನೂ ಉಪಯೋಗವಾಗುವುದಿಲ್ಲ. ಇವೊತ್ತೇನೋ ಲೋಕೋಪಯೋಗಿ ಸಚಿವರ ಮಗನ ಮದುವೆಗೆ ನಾಲ್ಕೈದು ಜನ ಹೋಗಿರಬಹುದು. ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಬೇರೆ ಯಾರೂ ಸದನಕ್ಕೆ ಬಂದು ಚರ್ಚೆಯಲ್ಲಿ ಭಾಗವಹಿಸುವುದಿಲ್ಲವೆಂದರೆ ಜನಗಳಿಗೆ ಇದರಿಂದ ಏನು ಆದೇಶ ಹೋಗುತ್ತದೆಂದರೆ ಸರ್ಕಾರದವರಿಗೆ ಸದನದ ಕಲಾಪಗಳಲ್ಲಿ ಆಸಕ್ತಿಯೇ ಇಲ್ಲವೆಂದು ತಿಳಿದುಕೊಳ್ಳುತ್ತಾರೆ. ನೀವು ಇದನ್ನು ಸಿ.ಎಲ್.ಪಿ.